ಮನುಷ್ಯ ಜೀವನದಲ್ಲಿ ಅನೇಕ ಬದಲಾವಣೆಗಳನ್ನು ಕಾಣಬಹುದು. ಈ ಬದಲಾವಣೆಗಳಿಗೆ ಸ್ಥಳ, ಹವೆ, ಸುತ್ತಮುತ್ತಲಿನ ವಾತಾವರಣಗಳು ಮೂಲ ಕಾರಣಗಳೆಂದು ಹೇಳಬಹುದು. ಇವುಗಳಿಗೆ ಹೊಂದಿಕೊಂಡು ಜನನು ಜೀವಿಸಲು ಯತ್ನಿಸುತ್ತಾರೆ.

ಬಹು ಹಿಂದಿನ ಕಾಲದಲ್ಲಿ ಮನುಷ್ಯರು ಕಾಡು ಪ್ರಾಣಿಗಳಂತೆ ಕಾಡುಗಳಲ್ಲಿ ವಾಸಿಸುತ್ತಿದ್ದರೆಂಬುದು ಚರಿತ್ರೆಗಳಲ್ಲಿ ಕಂಡು ಬರುತ್ತದೆ. ಅವರು ಮೈಗೆ ಬಟ್ಟೆ ಇಲ್ಲದೆ, ಬೆತ್ತಲೆ ಇದ್ದುಕೊಂಡು, ಹಣ್ಣು ಮಾಂಸ ಇತ್ಯಾದಿಗಳನ್ನು ತಿನ್ನುತ್ತಾ, ಜೀವಿಸುತ್ತಿದ್ದರು. ಈ ರೀತಿಯಲ್ಲಿ ಜೀವನ ನಡೆಸುತ್ತಿದ್ದವರು ತಮ್ಮ ಬುದ್ಧಿ ಶಕ್ತಿಯಿಂದ ಅನೇಕ ಬದಲಾವಣೆಗಳನ್ನು ಕಂಡುಕೊಂಡು ಇಂದಿನ ಸ್ಥಿತಿಗೆ ಬಂದಿದ್ದಾರೆ.

ಇಂದು, ಹಿಂದೆಂದೂ ಕಾಣದ ಅನೇಕ ಆಶ್ಚರ್ಯಕರವಾದ ವಿಚಾರಗಳನ್ನು ಮನುಷ್ಯರು ಅರಿತುಕೊಂಡಿದ್ದಾರೆ, ಕಾರ್ಯಗತ ಮಾಡಿದ್ದಾರೆ. ಇತ್ತೀಚೆಗೆ ಭೂಮಿಯಿಂದ ಇತರ ಗ್ರಹಗಳಿಗೆ ಹೋಗುವ ಸಾಹಸವನ್ನು ಮಾಡಿ ಜಯಶೀಲರಾಗಿದ್ದಾರೆ. ಅಂದಮೇಲೆ ಮಾನವನ ಬುದ್ಧಿಶಕ್ತಿ ಎಷ್ಟಿದೆಯೆಂದೂ, ಹೇಗಿದೆಯೆಂದೂ ವಿವೇಕಪೂರ್ವಕವಾಗಿ ಯೋಚಿಸಿದರೆ, ಮಾನವನು ಜನ್ಮವೆತ್ತಿದ್ದಕ್ಕೆ ಸಾರ್ಥಕವೆನ್ನಬಹುದು. ಆದರೆ ಮನುಷ್ಯನು ಜನ್ಮವೆತ್ತಿ, ಮಾನವತೆಯನ್ನು ಬೆಳಸಿ, ಕಾಪಾಡಿಕೊಳ್ಳುವ ಸಾಹಸವನ್ನು ಎಷ್ಟು

ಮಂದಿ ಮಾಡಿದ್ದಾರೆಂದು ಅರಿತರೆ ಕೇವಲ ಕೆಲವೇಯೆಂದು ತಿಳಿಯುವುದು. ಈ ವಿಧದ ಸಾಹಸಿಗಳು ಹತ್ತಾದರೆ ದುರ್ಮಾರ್ಗ ಪ್ರವರ್ತಕರು ಲಕ್ಷಾಂತರ. ಅಂದ ಮೇಲೆ ಪ್ರಪಂಚದ ಏಳಿಗೆ ಹೇಗಾಗುವುದು?

ಮಾನವನ ಏಳಿಗೆಯಾಗಬೇಕಾದರೆ ವಿವೇಕಶಾಲಿಗಳ ವಿವೇಕ ವರ್ತನೆಯಂತೆ ಎಲ್ಲರೂ ನಡೆದುಕೊಳ್ಳಬೇಕು. ಮೊಟ್ಟ ಮೊದಲು ಮುಂದಿನ ಜನಾಂಗವಾಗುವ ಇಂದಿನ ಮಕ್ಕಳ ರೀತಿ ನೀತಿಗಳನ್ನು ಸರಿಪಡಿಸಿ ಉತ್ತಮ ಸಮಾಜವನ್ನು ಕಟ್ಟಲು ಅಣಿಮಾಡಬೇಕು. ಈ ಕೆಲಸದ ಪ್ರಥಮ ಜವಾಬ್ದಾರಿ ತಾಯಿ ತಂದೆಯರ ಮೇಲೆ ಬೀಳುವುದು. ಮಗುವು ಹುಟ್ಟಿದೊಡನೆ ಪ್ರಪಂಚದ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಹಾತೊರೆಯುತ್ತಿರುತ್ತದೆ. ಆಗ ತಾಯಿ ತಂದೆಯರು ಅದಕ್ಕೆ ತಕ್ಕಂತೆ ನಡೆದುಕೊಳ್ಳಬೇಕು. ಮಗುವಿನ ಮುಂದೆ ತಾಯಿತಂದೆಯರು ಉತ್ತಮ ಗುಣ ನಡತೆಗಳನ್ನು ಪ್ರದರ್ಶಿಸಬೇಕು. ಕೆಟ್ಟ ಗುಣಗಳನ್ನು ತಮಾಷೆಗಾಗಿಯಾಗಲಿ ಮಗುವಿನ ಮುಂದೆ ಪ್ರದರ್ಶಿಸಬಾರದು. ಮಗುವು ಹುಟ್ಟಿ ಸಾಧಾರಣ ಮೂರು ವರ್ಷಗಳ ವರೆಗೆ ತಾಯಿಯ ಮಡಿಲಲ್ಲಿ ಬೆಳೆಯುವುದು. ಆಗ ಅದು ತಾಯಿಯ ಕಣ್ಣು, ಬಾಯಿ, ಕಾಲು, ಕೈಗಳ ಉಪಯೋಗವನ್ನು ಎಡೆಬಿಡದೆ ಕಂಡುಕೊಂಡು ಅನುಕರಿಸುವುದು. ತಾಯಿಯ ಮಾತುಗಳನ್ನು ಕೇಳುವುದು, ತಾಯಿಯು ನಡೆಯುವಂತೆ ನಡೆಯಲೆತ್ನಿಸುವುದು, ಮಾತನಾಡಿದಂತೆ ಮಾತನಾಡಲು ಸಾಹಸ ಮಾಡುವುದು. ಮೂರು ವರ್ಷಗಳ ವರೆಗೆ ತಾಯಿಯ ಗುಣಗಳ ಮೊದಲಿನ ಪಾಠವನ್ನು ಅರಿತುಕೊಳ್ಳುವುದು. ಇದುವೇ ಮಗುವಿನ ಮುಂದಿನ ಜೀವನ ನಡೆಸಲಿರುವ ಅಡಿಪಾಯ ವಾಗುವುದು. ಈ ಅಡಿಪಾಯವು ಉತ್ತಮ ರೀತಿಯಲ್ಲಿ ಇಲ್ಲದಿದ್ದರೆ ಮಗುವಿನ ಮುಂದಿನ ಜೀವನವೇ ಹಾಳಾಗಿ ಹೋಗುವುದು. ಆದುದರಿಂದ ತಾಯಿಯೇ ಮೊದಲಿನ ಗುರು, ಪಾಲಕಳು. ಇದನ್ನು ತಾಯಿ ಅರಿತುಕೊಂಡು, ಮಗುವನ್ನು ಮುನ್ನಡೆಸದಿದ್ದರೆ ತಾಯಿಯ ತಾಯ್ತನಕ್ಕೆ ಬೆಲೆ ಇಲ್ಲ. ತಾಯಿಯು ಮಹಾಪಾಪ ಮಾಡಿದಂತಾಗುವುದು. ಈ ಪಾಪದ ಫಲವು ಇಂದಿನ ಕಾಲದಲ್ಲಿ ತಾಯಿ ಸಾಯುವ ಮೊದಲೇ ಅರಿವಾಗುವುದು.

ಮಗುವಿನ ಎರಡನೆಯ ಅವಸ್ಥೆ ಮೂರು ವರ್ಷದಿಂದ ಐದು ವರ್ಷದ ವರೆಗೆ. ಆಗ ಮಗುವು ಮನೆಯೊಳಗಿಂದ ಹೊರಗಿನ ವಿಚಾರಗಳನ್ನು ತಿಳಿಯಲು ಯತ್ನಿಸುವುದು. ಈ ಸಮಯದಲ್ಲಿ ಅದರ ಉತ್ತಮ ಗುಣ ಗಳನ್ನು ಬೆಳೆಸಿಕೊಳ್ಳಲು ಬೇಕಾದ ತಕ್ಕ ಅನುಕೂಲತೆಗಳನ್ನು ಅದಕ್ಕೆ ತಪ್ಪದೆ ಒದಗಿಸಿಕೊಡಬೇಕು. ಮೂರು ವರ್ಷಗಳ ವರೆಗೆ ಏಕಾಂಗ ಜೀವನವನ್ನು ಮಾಡಿದ ಮೇಲೆ ಅದಕ್ಕೆ ಸಂಘ ಜೀವನದ ಪ್ರಥಮ ಪಾಠವನ್ನು ಕಲಿಯುವಂತೆ ವ್ಯವಸ್ಥೆ ಮಾಡಬೇಕು. ಇಲ್ಲಿ ಸಮ ವಯಸ್ಸಿನ ಹಲವು ಶಿಶುಗಳು ಒಟ್ಟು ಸೇರಿ ಅವುಗಳ ಮಾನಸಿಕ ಶಕ್ತಿಯ ವಿಕಾಸಕ್ಕೆ ಒಂದನ್ನೊಂದು ಅರಿತುಕೊಳ್ಳುವುವು; ಈ ಪವಿತ್ರವಾದ ಸಮಯದಲ್ಲಿ ಇವನ್ನು ಸರಿಯಾಗಿ ಮುನ್ನಡೆಸುವ ಓರ್ವ ಪ್ರತಿಭಾಶಾಲಿಯಾದ ತಾಯ್ತನದ ಮರ್ಮವನ್ನ ರಿತ ಚಾಲಕಳು ಅತ್ಯಗತ್ಯ. ಈಕೆಯೇ ಈ ಶಿಶುಗಳ ತಾಯಿಯೆನಿಸಬೇಕು. ತನ್ನ ಕರ್ತವ್ಯದ ಮಹತ್ವವನ್ನರಿತು ತಪ್ಪದೆ ನಡೆಯಬೇಕು, ನಡೆಸಬೇಕು. ಆಗ ಈ ಶಿಶುಗಳು ಐದು ವರ್ಷ ತುಂಬುವ ಸಮಯದಲ್ಲಿ ತಮ್ಮ ಗುಣಗಳ ನಿಜಾನುಭವವನ್ನು ಪಡೆದು ಓದು, ಬರೆಹದ ಮುಂದಿನ ಅನುಭವವನ್ನು ಪಡೆಯಲು ಇಚ್ಛಿಸುವುವು.

ಮುಂದೆ ಈ ಶಿಶುಗಳು ಎಷ್ಟೇ ದಾರಿತಪ್ಪಿ ಮುನ್ನಡೆಯುವಂತಿದ್ದರೂ, ಮೊದಲಿನ ಐದು ವರ್ಷಗಳಲ್ಲಿ ಪಡೆದ ಶಿಕ್ಷಣದ ಫಲವು ಎಂದೆಂದೂ ನಾಶವಾಗದು. ಅಂದ ಮೇಲೆ ಈ ಶಿಶುಗಳು ಮುಂದೆ ಬುದ್ಧಿಯಲ್ಲಿಯೂ, ಶರೀರದಲ್ಲಿಯೂ ಕ್ರಮವಾಗಿ ಬೆಳೆದು, ಮಹಾಪುರುಷರಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಈ ರೀತಿ ಎಲ್ಲಾ ಶಿಶುಗಳು ಬೆಳೆದು ಮುಂದಿನ ಜನಾಂಗವಾದರೆ ಭೂಲೋಕದ ಉದ್ಧಾರವಾಗುವುದರಲ್ಲಿ ಅನುಮಾನವೇನು ? ತಾಯಂದಿರ ಕೀರ್ತಿ ವಿಶ್ವದಲ್ಲಿ ಹರಡಲು ತೊಡಕೇನು ? ಸ್ತ್ರೀ ಜನಾಂಗವು ಈ ಸಾಹಸವನ್ನು ತಪ್ಪದೆ, ಕ್ರಮವಾಗಿ ಮಾಡಿದ್ದಾದರೆ ಲೋಕ ಕಲ್ಯಾಣವಾಗುವುದು. ಈ ಮಹತ್ಸಾಧನೆಯು ಲೋಕದ ಎಲ್ಲೆಡೆಗಳಲ್ಲಿಯೂ ಉತ್ಸಾಹಪೂರ್ವಕವಾಗಿ ನಡೆದು ಉದ್ಧಾರವಾಗಲೆಂದು ಹಾರೈಕೆ.

|| ಶುಭಮಸ್ತು ||

ಸಹಕಾರ

ಲೇಖಕ:— ಕೆ. ಪಿ. ಮುತ್ತಣ್ಣ, ಬಿ.ಎ.,ಎಲ್.ಟಿ.,
ನಿವೃತ್ತ ಉಪಾಧ್ಯಾಯರು, ಬಲಮುರಿ.

ಕೊಡಗಿನಲ್ಲಿ ಅನಾದಿ ಕಾಲದಿಂದಲೂ ಗ್ರಾಮುಗಳಲ್ಲಿ ರೈತರು ನಾನಾ ವಿಧಗಳಲ್ಲಿ ಪರಸ್ಪರ ಸಹಾಯವನ್ನು ಮಾಡಿಕೊಂಡು ಬಂದಿರುತ್ತಾರೆ. ಮದುವೆ-ಮುಂಜಿಗಳಲ್ಲಿಯೂ ವ್ಯವಸಾಯದಲ್ಲಿಯೂ, ಹಬ್ಬಗಳಲ್ಲೂ, ಈ ಸಹಕಾರ ತತ್ವವು ವಿಶೇಷವಾಗಿ ಕಾಣುತ್ತದೆ. ಆದರೆ ಬಂಡವಾಳಗಾರರ ಸಂಕೋಲೆಯಿಂದ ಬಡರೈತರು ಬಿಡುಗಡೆಯಾಗಲು ಯಾವ ದಾರಿಯೂ ಇರಲಿಲ್ಲ. 1904ರಲ್ಲಿ ಜಾರಿಗೆ ಬಂದ ಸಹಕಾರ ತತ್ವವು ರೈತರನ್ನು ಬಂಡವಾಳಗಾರರ ಹಾಗೂ ಬಡ್ಡಿ ಸಾಲ ವ್ಯಾಪಾರಿಗಳ ಕಬ್ಬಿಣದ ಕೈಹಿಡಿತದಿಂದ ತಪ್ಪಿಸಿ ಅವರನ್ನು ಇಂತಹ ಒಂದು ನಿರ್ಬಂಧದಿಂದ ಪಾರುಮಾಡಿತು. ಇದೇ ಸಹಕಾರ ಸಂಘಗಳು ಸಲ್ಲಿಸಿದ ಅಮೋಘವಾದ ಸೇವೆ. ಇದನ್ನು ಬಡರೈತರು ಒಂದು ವರಪ್ರಸಾದವೆಂದೇ ಭಾವಿಸಬೇಕು.

ಸ್ಥಾಪಕ :

ಸಹಕಾರ ಸಾಲ ಕೊಡುವ ಸಂಘವು ಪ್ರಥಮತಃ ಸುಮಾರು 19ನೇ ಶತಮಾನದ ಮಧ್ಯಭಾಗದಲ್ಲಿ ಜರ್ಮನಿಯ ಓರ್ವ ದೊಡ್ಡ ಉದಾರಿ ರಾಯಿ ಫಿಸೇನ್ ಎಂಬವನು ಸ್ಥಾಪಿಸಿದನು. ಅಲ್ಲಿಯ ರೈತರು ಎಹೂದ್ಯ (Jews) ಬಡ್ಡಿ ಸಾಲ ವ್ಯಾಪಾರಿಗಳ ಪಾಶಕ್ಕೆ ಸಿಲುಕಿ ಅವರಿಂದ ತಪ್ಪಿಸಿಕೊಳ್ಳಲು ಯಾವ ಉಪಾಯವನ್ನೂ ಕಾಣದೆ ಅತಿ ಸಂಕಟಕ್ಕೆ ಈಡಾಗಿದ್ದರು. ಈ ಸಹಕಾರಿ ಸಂಘದ ಮುಖ್ಯ ಲಕ್ಷಣವೇನೆಂದರೆ, ಅಸಹಾಯಕರಾದ ಮತ್ತು ಏಕಾಕಿಗಳಾದ ಅನೇಕ ವ್ಯಕ್ತಿಗಳು ಒಂದುಗೂಡಿ, ಒಂದು ಸಂಘ ಮಾಡಿಕೊಂಡು ಶ್ರೀಮಂತರು ಮತ್ತು ಶಕ್ತಿವಂತರು ಪಡೆಯಬಹುದಾದ ಅನುಕೂಲಗಳನ್ನೆಲ್ಲಾ ತಾವು ಕೂಡ ಪಡೆಯುವಂತೆ ಮಾಡಿಕೊಳ್ಳುವ ತತ್ವ. ಹೀಗೆ ರಾಯಿ ಫಿಸೇನನು ಗ್ರಾಮದ ವ್ಯಕ್ತಿಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ಸಂಘವನ್ನು ಸ್ಥಾಪಿಸಿ ಬೇಂಕಿನಿಂದ ಹಣ ಸಾಲ ಕೊಡುವಂತೆ ವ್ಯವಸ್ಥೆ ಮಾಡಿದನು. ಮಾತ್ರವಲ್ಲ, ರೈತರು ಸಂಪಾದಿಸಿದ ಹಣವನ್ನು ಬೇಂಕಿನಲ್ಲಿ ಠೇವಣಾತಿಯಾಗಿ ಇಡುವಂತೆ ಏರ್ಪಾಡು ಮಾಡಿದನು. ಅಂದಿನಿಂದ ರೈತರು ಪ್ರಗತಿಯ ಪಥದಲ್ಲಿ ಮುನ್ನುಗ್ಗುತ್ತಿದ್ದಾರೆ.

ಭಾ ರ ತ :

1883ನೇ ಇಸವಿಯಲ್ಲಿ ಪೂನಾ ಜಿಲ್ಲೆಯಲ್ಲಿ ಸರ್ ವಿಲಿಯಂ ಪೆಡರ್ನ್‌ಬರ್ನ್ ಎಂಬವನು ಒಂದು ವ್ಯವಸಾಯದ ಬೇಂಕನ್ನು ತೆರೆದನು. ಇದು ಯಶಸ್ವಿಯಾಗಲಿಲ್ಲ. ಆದರೆ ಫೆಡರಿಕ್ ನಿಕೋಲ್ಸನನು ಜರ್ಮನಿಗೆ ಹೋಗಿ, 1902ರಲ್ಲಿ ಇದರ ಬಗ್ಗೆ ಒಂದು ಪ್ರಕಟಣೆಯನ್ನು ಮಾಡಿದನು. 1904ರಲ್ಲಿ ಇಂಡಿಯಾ ಸರ್ಕಾರವು ಆ ಪ್ರಕಟಣೆಗೆ ಅನುಸಾರವಾಗಿ ಸಾಲಗಾರರ ಸಹಕಾರ ಸಂಘದ ಮಸೂದೆಯನ್ನು ಪಾಸು ಮಾಡಿತು. 1912ರಲ್ಲಿ ಇದನ್ನು ತಿದ್ದುಪಡಿ ಮಾಡಲಾಯಿತು.

ಕೊ ಡ ಗು :

ಕೊಡಗಿನಲ್ಲಿ ಸಹಕಾರ ಸಂಘವು 1905ರಲ್ಲಿ ಉದ್ಭವಿಸಿತು. ಆಗ ಬರೆ ಸಾಲದ ಸಂಘ ಮಾತ್ರ ರೂಢಿಯಲ್ಲಿತ್ತು. ಅದು ಮುಂದಗತಿಯಲ್ಲಿದ್ದಿತು. ಆದರೆ 1914-15ರಲ್ಲಿ ಮೆಕಲ್‌ಗಾನ್ ಕಮಿಟಿಯ ವರದಿಯು ಪ್ರಕಟವಾಯಿತು. ಇದರ ಪ್ರಕಾರ ಒಂದೊಂದು ಗ್ರಾಮಕ್ಕೆ ಒಂದೊಂದು ಸಾಲದ ಸಹಕಾರ ಸಂಘ ಸ್ಥಾಪಿತ ವಾಯಿತು. ಅಂದಿನಿಂದ ಕೊಡಗಿನಲ್ಲಿ ಸಹಕಾರ ಸಂಘದ ಬೆಳವಣಿಗೆಯು ಬಹಳ ಭರದಿಂದ ಸಾಗಿತು.

1 9 6 8 ರಲ್ಲಿ

ಈಗ (1968ರಲ್ಲಿ) ಕೊಡಗಿನಲ್ಲಿ ವಿವಿಧ ಸಂಘಗಳು ಜನ್ಮವೆತ್ತಿವೆ. ಶೇ. 90ರಷ್ಟು ರೈತರು ಇದರಲ್ಲಿ ಭಾಗವಹಿಸಿದ್ದಾರೆ. 482 ವಿವಿಧ ಸಂಘಗಳಿವೆ. 1.13 ಲಕ್ಷ ಜನರು 83.28 ಲಕ್ಷ ಹಣವನ್ನು ಕೊಟ್ಟು ಸದಸ್ಯರಾಗಿರುತ್ತಾರೆ. ಕಾದಿರಿಸಿದ ನಿಧಿ (Reserve Fund) ಮತ್ತಿತರ ನಿಧಿ ಸುಮಾರು 180 ಲಕ್ಷ ಮತ್ತು 21 ಲಕ್ಷ ಅನುಕ್ರಮವಾಗಿ ಇವೆ. ಹೀಗೆ ಒಟ್ಟಿನಲ್ಲಿ 478 ಲಕ್ಷ ಹಣವು ಚಲಾವಣೆಯಲ್ಲಿದೆ.

ವಿವಿಧ ಸಂಘಗಳು:

ಜಿಲ್ಲಾ ಸಹಕಾರ ಕೇಂದ್ರ ಬೇಂಕು; ಜಮೀನು ಅಡಮಾನ ಬೇಂಕು; ಪ್ರಾಥಮಿಕ ಸಹಕಾರ ಸಂಘ; ರಾಜ್ಯದ ಮಟ್ಟದಲ್ಲಿ ಕೆಲಸ ಮಾಡುವ ಬೇಂಕು, ಫಸಲು ಸಾಲ ಕೊಡುವ ಸಂಘಗಳು, ಸಹಕಾರಿ ವ್ಯವಸಾಯ ಮಾರುಕಟ್ಟೆಗಳು; ವಿವಿಧೋದ್ದೇಶ ಸಂಘಗಳು; ಸಹಕಾರಿ ಬೇಸಾಯ ಪದ್ಧತಿ; ದವಸ ಭಂಡಾರಗಳು; ವಿದ್ಯಾರ್ಥಿಗಳ ಪುಸ್ತಕದ ಸ್ಟೋರ್ಸ್; ಜಿಲ್ಲಾ ಸಹಕಾರ ಯೂನಿಯನ್; ಹಣ್ಣು ಹಂಪಲುಗಳ ಪ್ರವೃತ್ತಿಯ ವ್ಯವಸ್ಥೆ ಸಂಘ; ಸಹಕಾರ ಮಹಿಳಾ ಸಮಾಜ; ಹೀಗೆ ಇನ್ನೂ ಹಲವಾರು ಬಗೆಬಗೆಯ ಸಹಕಾರ ಸಂಘಗಳು ಕೊಡಗಿನಲ್ಲಿ ಕಾಫಿ ತೋಟಗಳು ಕಾಣುವ ಹಾಗೆ ದೇಶಾದ್ಯಂತ ಹಳ್ಳಿ ಹಳ್ಳಿ ಗಳಲ್ಲಿಯೂ ಮನೆಮನೆಗಳಲ್ಲಿಯೂ ಹಬ್ಬಿವೆ.

ಸಹಕಾರ ಸಂಘದ ಉದ್ದೇಶ :

ಸಹಕಾರ ಸಂಘದ ಮುಖ್ಯ ಉದ್ದೇಶಗಳು ಮೂರು— ಸ್ವಾವಲಂಬನ, ಮಿತವ್ಯಯ ಮತ್ತು ಪರಸ್ಪರ ಸಹಾಯ. ಈ ಮೂರು ಉದ್ದೇಶಗಳನ್ನು ಕಾರ್ಯಗತ ಮಾಡುವುದೆಂದರೆ ಮಹಾಪ್ರಯಾಸ.

ಒಂದು ಸಾವಿರಕ್ಕೆ ಐನತ್ತು ಜನರು ಈ ತತ್ವಗಳನ್ನು ಅನುಷ್ಠಾನಕ್ಕೆ ತರುತ್ತಾರೋ ಎಂಬ ಶಂಕೆಯು ಎದ್ದು ನಿಲ್ಲುತ್ತದೆ. ಆದರೂ ಈ ಸಹಕಾರ ಸಂಸ್ಥೆಯು ರೈತರಿಗೆ ತುಂಬಾ ಉಪಯುಕ್ತವಾಗಿದೆ. ಬಡತನದಿಂದ ಪೂರಾ ಮುಕ್ತರಾಗದಿದ್ದರೂ ಸಹ ತಮ್ಮ ದೈನಂದಿನ ಜೀವನವನ್ನು ಸುಖಮಯವಾಗಿ ಸಾಗಿಸಿಕೊಂಡು ಹೋಗಲು ಬೇಕಾದಷ್ಟು ಸಾಲವು ಹಲವಾರು ಸಂಘಗಳಿಂದ ಸುಲಭ ಬಡ್ಡಿಯಲ್ಲಿ ದೀರ್ಘ ಕಂತುಗಳಲ್ಲಿ ದೊರೆತು ಮರುಪಾವತಿ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿದೆ.

ಪ್ರಯೋಜನಗಳು :

ಸಹಕಾರ ಸಂಸ್ಥೆಯಿಂದ ರೈತರಿಗೆ ಉಂಟಾದ ಪ್ರಯೋಜನಗಳನ್ನು ವಿವರಿಸಲು ಸಾಧ್ಯವಿಲ್ಲ. ಈವತ್ತು ಕೊಡಗು ಕಾಫಿ, ಕಿತ್ತಳೆ, ಏಲಕ್ಕಿ, ಒಳ್ಳೆಮೆಣಸು ಮೊದಲಾದ ಕೃಷಿಗಳಿಂದ ಕಂಗೊಳಿಸಿ ಉದ್ಯಾನ ವನದಂತೆ ಕಂಡುಬಂದರೆ ಇದಕ್ಕೆ ಮುಖ್ಯ ಕಾರಣವೂ ಸಹಕಾರ ಸಂಘಗಳಿಂದ ರೈತರಿಗೂ ಪ್ಲಾಂಟರಿಗೂ ಕಡಿಮೆ ಬಡ್ಡಿಯಲ್ಲಿ ಸಾಲ ಸಿಕ್ಕುವುದರಿಂದಲೇ ಆಗಿದೆ. ಈ ಸಂಘಗಳು ಸಲ್ಲಿಸಿದ ಸೇವೆಯನ್ನು ಸ್ವರ್ಣಾಕ್ಷರ ಗಳಲ್ಲಿ ಬರೆಯತಕ್ಕದ್ದು. ಹಳ್ಳಿಯಲ್ಲಿ ರೈತರಿಗೆ ಗೊಬ್ಬರವನ್ನು ಒದಗಿಸುವುದು, ಪಟ್ಟಣದಲ್ಲಿ ರೇಶನ್ ಕಾರ್ಡಿಗೆ ಅಕ್ಕಿ, ಗೋಧಿ, ರಾಗಿ ಮೊದಲಾದುವುಗಳನ್ನು ಸರಬರಾಜು ಮಾಡುವುದು, ಇದೆಲ್ಲವು ಸಹಕಾರ ಸಂಸ್ಥೆಯ ಮೂಲಕವೇ ಆಗಿದೆ. ಒಟ್ಟಿನಲ್ಲಿ ಇಂತಹ ಸಹಕಾರ ಸಂಸ್ಥೆಯನ್ನು ತೆಗೆದು ಹಾಕಿದ್ದೇ ಆದರೆ ಬಡ ರೈತರ ಅವಸ್ಥೆಯು ಎಷ್ಟೊಂದು ಅಧೋಗತಿಗೆ ಇಳಿಯುವುದೆಂಬುದನ್ನು 1910ನೇ ಇಸವಿಗೆ ಮುನ್ನ ಹುಟ್ಟಿದ ಜನರಿಗೆ ಮಾತ್ರ ಅರಿಯಲು ಸಾಧ್ಯ ವಿನಹ, ಇತರರಿಗೆ ಅದನ್ನು ತಿಳಿಯಲು ಸಾಧ್ಯವಿಲ್ಲ. ಸಹಕಾರ ಸಂಘಗಳು ಗ್ರಾಮಾಂತರಗಳಲ್ಲಿನ ಜನರನ್ನು ಮತದಾನ ಮಾಡುವ ಪದ್ಧತಿ, ಕಮಿಟಿ-ಪ್ರೆಸಿಡೆಂಟರನ್ನು ಆಯ್ಕೆ ಮಾಡುವ ವ್ಯವಸ್ಥೆ, ಭಾಷಣ ಕೊಡುವ ತರಬೇತು, ಗ್ರಾಮದ ನಾಯಕರನ್ನು ಕಂಡು ಹಿಡಿಯುವ ಶಕ್ತಿ-ಇವುಗಳಲ್ಲಿ ಸೂಕ್ತ ಶಿಕ್ಷಣ ಹಾಗೂ ಅನುಭವವನ್ನು ಕೊಟ್ಟು ಪ್ರಜಾಸತ್ತೆಯ ಸರಕಾರವನ್ನು ನಡೆಸಲು ನುರಿತ ನಾಗರಿಕರನ್ನಾಗಿ ಮಾಡಿರುತ್ತವೆ.

ಲೋಪದೋಷಗಳು :

ಸಮಗ್ರ ದೇಶವೇ ಸಾಲದಲ್ಲಿ ಮುಳುಗಿದೆ. ಕೆಲವು ಸಂಘಗಳು, ಸ್ಟೋರುಗಳು, ದಿವಾಳಿ ಯಾಗಿವೆ. ಭ್ರಷ್ಟಾಚಾರವು ಕಾರ್ಯನಿರ್ವಾಹಕ ಸಮಿತಿಯಲ್ಲಿ ದಿನೇ ದಿನೇ ಹೆಚ್ಚಾಗುತ್ತಲಿದೆ. ಸದಸ್ಯರು ಯಾವ ಉದ್ದೇಶಕ್ಕೆ ಸಾಲ ಪಡೆಯುತ್ತಾರೋ, ಆ ಉದ್ದೇಶಕ್ಕೆ ಅದನ್ನು ಬಳಸದೆ ದುರುಪಯೋಗ ಮಾಡಿಕೊ ಳ್ಳುತ್ತಿದ್ದಾರೆ. ಎಷ್ಟು ಸಾಲ ಸಿಕ್ಕಿದರೂ ಅಷ್ಟು ಸಾಲವನ್ನು ಸದಸ್ಯರು ಹೊಂದಿಕೊಂಡು ಸಕಾಲಕ್ಕೆ ಮರುಪಾವತಿ ಮಾಡುವುದಿಲ್ಲ. ಸ್ವಾವಲಂಬನ, ಮಿತವ್ಯಯ ಮತ್ತು ಪರಸ್ಪರ ಸಹಕಾರ ಈ ಮೂರು ತತ್ವಗಳು ಬೈಲಾದಲ್ಲಿ ಮಾತ್ರ ಕಾಣುವುದೇ ವಿನಹ ಕಾರ್ಯರೂಪದಲ್ಲಿ ಕಾಣುವುದೇ ಇಲ್ಲ ಎಂದು ಹೇಳಬೇಕಾಗಿದೆ. ಅದರ ಬದಲು ಸಾಲ ಹೊಂದುವುದರಲ್ಲಿ ನುರಿತವರಾಗಿರುವರು. ಸಾಧಾರಣ ಬಡಬಗ್ಗರಲ್ಲಿ ಹಣಕ್ಕೆ ಅಭಾವವಿಲ್ಲ. ಬಸ್ಸು, ಸಾರಾಯಿ, ಸಿನಿಮಾ— ಇವುಗಳಿಗೆ ಖರ್ಚು ಮಾಡಲು ಹಣಕ್ಕೆ ತೊಂದರೆಯೇ ಇಲ್ಲ. ಜೀವನದ ಮಟ್ಟ ಸ್ವಲ್ಪ ಏರಿದರೂ ಸಹ ಗ್ರಾಮಸ್ಥರ ಆರ್ಥಿಕ ಸ್ಥಿತಿಯು ಚಿಂತಾಜನಕವಾಗಿದೆ. ಹುಲ್ಲಿನ ಮನೆಗಳೆಲ್ಲ ಕಡಿಮೆ

ಯಾಗಿ ಹಂಚಿನ ಮನೆಗಳೇ ಎಲ್ಲ ಗ್ರಾಮಗಳಲ್ಲೂ ಹೆಚ್ಚಾಗುತ್ತಲಿವೆ. ಒಟ್ಟನಲ್ಲಿ ಸಹಕಾರ ಸಂಸ್ಥೆಯು ಜನರಿಗೆ ಒಳ್ಳೆಯದನ್ನೇ ಮಾಡಿದೆ. ಏಕೆಂದರೆ ಎಷ್ಟೇ ಸಾಲವಿದ್ದರೂ ದೈನಂದಿನ ಜನಜೀವನವು ಸುಸೂತ್ರ ವಾಗಿ, ಸುಖಮಯವಾಗಿ ಸಾಗುತ್ತಿದೆ. ಸಹಕಾರ ಸಂಘಗಳು ಬರುವುದಕ್ಕೆ ಮುಂಚೆ ಬಡವರಿಗೂ, ಕೆಲವು ಬಂಡವಾಳಗಾರರಿಗೂ ಅತಿ ಬೃಹತ್ ಪ್ರಮಾಣದ ಅಂತರವಿದ್ದಿತು. ಅದು ಈಗ ಬಹಳ ಮಟ್ಟಿಗೆ ಅದೃಶ್ಯ ವಾಗಿದೆ. ಭಾರತದ ಸಹಕಾರ ಕ್ಷೇತ್ರದಲ್ಲಿ ಇಂದು ತಲೆದೋರಿರುವ ಅತಿ ಪ್ರಮುಖವಾದ ದೋಷವು ಯಾವು ದೆಂದರೆ ಸೇವೆ ಮತ್ತು ಸಹಕಾರದ ಹೆಸರಿನಲ್ಲಿ ಕೇವಲ ಕೆಲವೇ ಜನ ಸ್ವಾರ್ಥಹಿತಾಸಕ್ತರು ಸಹಕಾರಿ ಸಂಸ್ಥೆ ಗಳನ್ನು ತಮ್ಮ ಹಿಡಿತದಿಂದ ಬಿಟ್ಟು ಹೋಗದಂತೆ ಸ್ವಾಧೀನದಲ್ಲಿ ಇರಿಸಿಕೊಂಡು ಆ ಮೂಲಕ ತಮ್ಮ ಸ್ವಹಿತ ಮತ್ತು ಸ್ವಾರ್ಥಗಳನ್ನು ಸಾಧಿಸಿಕೊಳ್ಳುವುದು.

ವಿಡಂಬನೆ :

ಗಣಿತ ಪಾಠ ಹಾಗೂ ನಮ್ಮ ನೈತಿಕ ಮಟ್ಟ !

ಲೇಖಕ:— ಬಿ. ಡಿ. ಗಣಪತಿ
ಸಂಪಾದಕರು: "ಕೊಡಗು", ಮಡಿಕೇರಿ.

"ನನಗೊಂದು ಚೂರು ಕಾಗದ ಕೊಡು" ಎಂದು ಹೋಟೆಲಿನ ಮಾಣಿಯನ್ನು ಕೇಳಿದೆ. ಕೈಗೆ ಅಂಟಿದ್ದ ಎಣ್ಣೆ ವಸ್ತುವನ್ನು ಒರಸಿ ತೆಗೆಯಬೇಕಿತ್ತು. ಮಾಣಿಯು ಏನೋ ಗೊಣಗುತ್ತಾ ಒಂದು ಚೂರು ಕಾಗದ ತಂದುಕೊಟ್ಟನು.

ನಾನು ಬಹು ಎಚ್ಚರಿಕೆಯ ಮನುಷ್ಯ. ಕಾಗದ ಚೂರಿನಲ್ಲಿ ಎಂಥಾ ಗಹನ ವಿಚಾರವಿರಬಹುದೋ ಬಲ್ಲವರಾರು? ಆದ್ದರಿಂದ ದೊರೆತ ಕಾಗದ ಚೂರಿನಲ್ಲಿ ಏನು ಬರೆದಿದೆಯೆಂದು ನೋಡುವ ಅಭ್ಯಾಸ ನನ್ನದು. ಕೈ ಒರೆಸುವ ಮೊದಲು ಕಾಗದವನ್ನು ತಿರುಗಿಸಿ, ಮರುಗಿಸಿ ನೋಡಿದೆ.

ಅದರಲ್ಲಿ ಹೆಚ್ಚೇನಿರಲಿಲ್ಲ. ಯಾವುದೋ ಲೆಕ್ಕ ಪುಸ್ತಕದ ಒಂದು ಹಾಳೆ ಅದಾಗಿತ್ತು. ಅದರಲ್ಲಿ ಈ ಕೆಳಗಿನ ಲೆಕ್ಕವಿತ್ತು.

"ಒಬ್ಬ ಹಾಲು ಮಾರುವವನು ಸೇರಿಗೆ ೭೫ ಪೈಸೆಯಲ್ಲಿ ಹಾಲು ಪಡೆಯುತ್ತಾನೆ. ಅದಕ್ಕೆ ಸಾಕಷ್ಟು ನೀರು ಬೆರೆಸಿದ ನಂತರ ಸೇರಿಗೆ ಒಂದು ರೂಪಾಯಿಯಂತೆ ಮಾರಿ ಶೇಕಡ ೪೦ರಷ್ಟು ಲಾಭ ಪಡೆಯುತ್ತಾನೆ. ಹಾಗಾದರೆ ಆತನು ಸೇರಿಸಿದ ನೀರೆಷ್ಟು ? "

ಅದನ್ನು ನಿಧಾನವಾಗಿ ಒಂದೆರಡು ಬಾರಿ ಓದಿದೆ. ನನಗೆ ಕ್ರಮಶಃ ಅರ್ಥವಾಗತೊಡಗಿತು. ಈ ಕಾರಣಕ್ಕಾಗಿಯೇ ಹೋಟೆಲಿನಲ್ಲಿ ನನಗೆ ಕೊಡಲ್ಪಟ್ಟ ಪಾನೀಯ ಕಾಫಿ ಎನಿಸಿಕೊಳ್ಳುವ ಬದಲು ಹೆಚ್ಚು ನೀರೇ ಆಗಿತ್ತು !

ಚಿಕ್ಕ ಮಗುವಿಗೆ ಶಾಲೆಯಲ್ಲಿ ಹಾಲಿಗೆ ನೀರನ್ನು ಸೇರಿಸುವುದರಿಂದ ಯಾವ ಪ್ರಮಾಣದ ಲಾಭವಾಗುತ್ತ

ದೆಂಬುದನ್ನು ಈ ಲೆಕ್ಕ ಯಾ ಗಣಿತ ಪಾಠದ ಮುಸುಕಿನಲ್ಲಿ ನಾವು ಹೇಳಿಕೊಡುತ್ತಿರುವಾಗ ಆ ಮಗು ಬೆಳೆದು ತನ್ನ ಸ್ವತಂತ್ರ ಉದ್ಯಮವನ್ನು ತೊಡಗಿದಾಗ ಈ ಚಿಕ್ಕಂದಿನ ಗಣಿತ ಪಾಠದಲ್ಲಿ ಕಲಿತ ಲಾಭದ ಅನುಭವವು ಆತನನ್ನು ಆ ಕಡೆ ಆಕರ್ಷಿಸುವುದು ಸ್ವಾಭಾವಿಕವೇ ಇದೆ. ಇಂದು ಎಲ್ಲಿಯೂ ಕೂಡ ಶುದ್ಧ ಹಾಲು ದೊರೆಯದಿದ್ದರೆ ಅದರಲ್ಲಿ ಆಶ್ಚರ್ಯಪಡುವಂಥಾದ್ದೇನೂ ಇಲ್ಲ.

ನಾನು ಮನೆಗೆ ಹಿಂತಿರುಗುವಾಗ ಮಕ್ಕಳಿಗಾಗಿ ಒಂದೆರಡು ಲೆಕ್ಕ ಪುಸ್ತಕಗಳನ್ನು ಕೊಂಡುಕೊಳ್ಳಬೇಕಿತ್ತು. ಆಸಕ್ತಿಯಿಂದ ಆ ಲೆಕ್ಕಪುಸ್ತಕಗಳ ಪುಟಗಳನ್ನು ಮಗುಚಿ ನೋಡಿದೆ. ಅವುಗಳಲ್ಲಿರುವ ಲೆಕ್ಕಗಳ ಮಾದರಿಯನ್ನು ನೋಡಿ ಹೌಹಾರಿದೆನು. ನಾವು ಮಕ್ಕಳಿಗೆ ವಿದ್ಯೆ ಕಲಿಸುತ್ತಿರುವೆವಂತೆ ! ಇದೇ ವಿದ್ಯೆಯೇ ?

ತುಪ್ಪಕ್ಕೆ ಎಣ್ಣೆ ಬೆರೆಸುವುದು, ಕಾಫಿಗೆ ಚಿಕೋರಿ ಮಿಶ್ರ ಮಾಡುವುದು, ಆ ರೀತಿ ಮಿಶ್ರಣ ಮಾಡಿ ಲಾಭ ಸಂಪಾದಿಸುವುದು ಹೇಗೆಂಬುದನ್ನು ನಮ್ಮ ಗಣಿತ ಪುಸ್ತಕಗಳು ಹಸುಳೆಗಳ ಮೆದುಳಿಗೆ ತುಂಬುತ್ತಿವೆ. ಇದೇ ಗಣಿತ ಪಾಠವಂತೆ !

ಇದಕ್ಕೆ ನೂರಾರು ಉದಾಹರಣೆಗಳನ್ನು ಕೊಡಬಹುದು.

"ಒಬ್ಬ ಮದ್ಯಪಾನ ವರ್ತಕನು ೫ ಭಾಗ ಮದ್ಯಕ್ಕೆ ೭ ಭಾಗ ನೀರು ಬೆರೆಸಿ ಈ ಮಿಶ್ರಣವನ್ನು .... ದರದಲ್ಲಿ ಮಾರಿ .... ಲಾಭ ಸಂಪಾದಿಸುತ್ತಾನೆ.

ಇಲ್ಲವೇ—

ಒಬ್ಬ ಅಕ್ಕಿ ವ್ಯಾಪಾರಿಯು ೧ ಕ್ವಿಂಟಾಲ್ ಅಕ್ಕಿಗೆ ೫ ಕಿಲೊಗ್ರಾಂ ಬಿಳಿಕಲ್ಲು ಸೇರಿಸಿ ಕ್ವಿಂಟಾಲಿಗೆ ಶೇಕಡ ೧೨ರಷ್ಟು ಲಾಭ ಮಾಡುತ್ತಾನೆ. ಹಾಗಾದರೆ ಆತನು ವಿಂಸಿದ ಬೆಲೆಯು ದರವನ್ನು ಕಂಡುಹಿಡಿ."

ಇಷ್ಟೇ ಅಲ್ಲ; ಇದೇ ಗಣಿತ ಪಾಠದಲ್ಲಿ ಸಾಮಾನು ಕೊಂಡುಕೊಳ್ಳುವಾಗ ಒಂದು ಅಳತೆ, ಮಾರುವಾಗ ಇನ್ನೊಂದು ಅಳತೆ ಉಪಯೋಗಿಸಿ ಹೇಗೆ ಲಾಭ ಮಾಡಬಹುದೆಂಬುದೂ ಕಲಿಸಲ್ಪಡುತ್ತದೆ!

"ಸಾಧ್ಯವಾದಾಗಲೆಲ್ಲ ನಿನ್ನ ನೆರೆಯವನ ಕಿಸೆಗೆ ಕನ್ನ ಹಾಕು" ಎಂಬ ಈ ಮೇಲಿನ ಮಾದರಿಯ ಗಣಿತ ಪಾಠದ ಜೊತೆಗೆ ಶಾಲೆಯಲ್ಲಿ ಇತರ ನೀತಿ ಪಾಠಗಳೂ, ಬೋಧಪ್ರದ ವಿಚಾರಗಳೂ ಕಲಿಸಲ್ಪಡುತ್ತವೆ, ಎಂಬುದು ನಿಜವಾದರೂ ಒಂದಕ್ಕೊಂದು ವಿರುದ್ಧವಾದ ಈ ಪಾಠಕ್ರಮದ ಗೊಂದಲದಲ್ಲಿ ವಿದ್ಯಾರ್ಥಿಯು ಯಾವುದರಿಂದ ಹೆಚ್ಚಿನ ಭೌತಿಕ ಲಾಭ ಬರುತ್ತದೋ ಅದನ್ನೇ ಆರಿಸಿಕೊಳ್ಳುವುದರಲ್ಲಿ ಆಶ್ಚರ್ಯವೇನಿಲ್ಲ.

ನಮ್ಮ ಗಣಿತ ಪುಸ್ತಕಗಳು ಹೂ ಮನಸ್ಸಿನ ಮಕ್ಕಳ ಮನೋಭಾವಕ್ಕೆ ದರೋಡೆ ಪ್ರವೃತ್ತಿಯನ್ನು ಮಿಶ್ರಗೊಳಿಸಲು ಅದ್ಭುತ ಒಳಸಂಚನ್ನೇ ಮಾಡುತ್ತಿವೆ. ರಾಜಕೀಯ ರಂಗದ ಪಂಚಮದಳದವರಂತೆ ವಿದ್ಯಾರಂಗದಲ್ಲಿ ಗಣಿತ ಪಾಠವು ಗೂಢಾಚಾರದ ಕೆಲಸವನ್ನೇ ಮಾಡುತ್ತಿದೆ. ಈ ಬೇಹುಗಾರಿಕೆಯ ಕಾರಣವೇ ಮಕ್ಕಳ ಬೆಳೆಯದ ಮನವು ಸುಲಭವಾಗಿ ತನ್ನ ನೈತಿಕ ಮಟ್ಟವನ್ನು ಕಳೆದುಕೊಳ್ಳುತ್ತದೆ.

"ರಾಮುನಿಗೆ ಗೋವಿಂದನಿಗಿಂಥ ಎರಡು ಪಟ್ಟು ಹೆಚ್ಚು ಹಣವಿದೆ. ಶಂಕರನಿಗೆ ರಾಮುನ ಒಂದೂವರೆ ಪಾಲು ಅಧಿಕವಿದೆ. ಈ ದಾಮಾಶಯದಂತೆ ಹತ್ತು ಸಾವಿರ ರೂಪಾಯಿಗಳನ್ನು ಅವರೊಳಗೆ ಹಂಚು."

ಈ ರೀತಿಯ ಲೆಕ್ಕಗಳು ಎಳೆ ವಯಸ್ಸಿಗರಲ್ಲಿ ಈರ್ಷೆ, ದ್ವೇಷಗಳನ್ನು ಹೆಚ್ಚಿಸುವುದಿಲ್ಲವೇ ? ಪರಸ್ಪರರಲ್ಲಿ ಸ್ಪರ್ಧಾ ಭಾವನೆಯನ್ನೂ ಪರಿಣಾಮವಾಗಿ ಅನೈಕ್ಯತೆಯ ಬೀಜವನ್ನೂ ಬಿತ್ತುವುದಿಲ್ಲವೇ ?

'ಶೇಕಡ ೨೫ರ ಬಡ್ಡಿಯಲ್ಲಿ ಕೊಡಲ್ಪಟ್ಟ ರೂ.

೨೫೦ ಎಷ್ಟು ಸಮಯದಲ್ಲಿ ರೂ. ೧೦೦೦/– ವಾಗುವುದು'' ಈ ರೀತಿಯ ಆಶಾ ಪ್ರಚೋದಕ ಮತ್ತು ಕ್ಷಿಪ್ರದಲ್ಲಿ ಹಣಗಳಿಸುವ ಮನೋಭಾವ ಪ್ರೇರೇಪಕ ಮಾದರಿಗಳಿಂದ ಮಕ್ಕಳ ಮನಸ್ಸಲ್ಲಿ ನಮ್ಮ ಆರ್ಷೇಯ ಪರಂಪರೆಗಳಾದ ತ್ಯಾಗ, ಧಾರಾಳತನ, ಪರದುಃಖ ನಿವಾರಣೆಗಳತ್ತ ಒಲಿಯುವುದೆಂತು ?

ಇನ್ನೊಂದು ಉದಾಹರಣೆ ಕೊಡಬಹುದಾದರೆ "ನನ್ನ ಹಿರಿ ಮಗನ ವಿದ್ಯಾಭ್ಯಾಸಕ್ಕೆ ೧೦ ಸಾವಿರ ಮಗಳ ಮದುವೆಗೆ ೮ ಸಾವಿರ, ಎಳೆಯ ಮಗುವಿನ ಕಾಯಿಲೆಗೆ ೮೦೦ ರೂ. ವೆಚ್ಚ ಮಾಡಿದ ಮೇಲೆ ನನ್ನಲ್ಲಿ ೩೦೦೦ ರೂಪಾಯಿಗಳ ಆಸ್ತಿ ಉಳಿದಿದೆ. ಹಾಗಾದರೆ ಮೊದಲು ನನ್ನಲ್ಲಿದ್ದ ಆಸ್ತಿಯ ಮೌಲ್ಯವೆಷ್ಟು ?"

ತನ್ನ ಕುಟುಂಬದ ಹಿತಕ್ಕಾಗಿ ವೆಚ್ಚವಾದುದನ್ನು ಈ ರೀತಿ ಹಣದ ಮಾಪನಗಳಿಂದ ಲೆಕ್ಕ ಹಾಕುವ ಭೌತಿಕ ಮನೋಭಾವದ ಪ್ರಭಾವ ಮಕ್ಕಳ ಮೇಲೆ ಹೇಗಾದೀತು ?

ಇನ್ನೊಂದು ಲೆಕ್ಕ ನೋಡಿ: "ಒಬ್ಬ ತಂದೆಯು ತನ್ನ ಆಸ್ತಿಯ ಎರಡನೇ ಒಂದಂಶವನ್ನು ಹಿರಿಯ ಮಗನಿಗೂ, ಉಳಿದುದರ ಅರ್ಧಾಂಶವನ್ನು ತನ್ನ ಮಗಳಿಗೂ, ಉಳಿದುದನ್ನು ತನ್ನ ಪತ್ನಿಗೂ ಹಂಚಿ ಮೃತನಾಗುತ್ತಾನೆ." ಈ ಮಾದರಿಯ ಲೆಕ್ಕ ಮಾಡುವ ಮಕ್ಕಳು ಇಂದಿನ ದುಡ್ಡಿನ ಆರಾಧನೆಯ ಹಾಗೂ ಭೌತಿಕ ಉಪಾಸನೆಯ ಜಗತ್ತಿನಲ್ಲಿ ಆದಷ್ಟು ಬೇಗ ತಂದೆ ಸತ್ತು ತಮಗೆ ಆಸ್ತಿ ದೊರೆಯಲೆಂದು ಆಶಿಸುವುದರಲ್ಲಿ ಆಶ್ಚರ್ಯವೇನಿದೆ ?

ಇಂದಿನ ಯುವ ಪೀಳಿಗೆಯವರಲ್ಲಿ ಹೆಚ್ಚು ಜನರು ಕನಸಿನ ರಾಜ್ಯದಲ್ಲಿ ವಿಹರಿಸುತ್ತಿದ್ದರೆ, ಅಸಾಧ್ಯ ಸುಖದ ಕಲ್ಪನೆಯಲ್ಲಿ ನಿಷ್ಕ್ರಿಯರಾಗಿದ್ದರೆ, ಭ್ರಷ್ಟಾಚಾರ, ವಾಮಾಚಾರಗಳಿಗೆ ಬಲಿಯಾಗಿದ್ದರೆ ಶಾಲೆಯಲ್ಲಿ ಕಲಿಸುವ "ಆದರೆ ಹೋದರೆ" ಲೆಕ್ಕ ಪಾಠವೂ ಪ್ರಬಲ ಕಾರಣ. ಉದಾಹರಣೆಗೆ "ನಾನು ಈಗ ಸಂಪಾದಿಸುವುದರ ಹತ್ತು ಪಟ್ಟು ಹೆಚ್ಚು ಸಂಪಾದಿಸುವುದಾದರೆ ... ." ಇಲ್ಲವೇ "ನಾನಿರುವ ಮನೆ ಮಹಡಿ ಮನೆಯಾಗಿದ್ದು ಮಹಡಿಯ ಎತ್ತರ ೬೦ ಅಡಿ ಇದ್ದು ಅದರ ನೆರಳು ಇಷ್ಟು ದೂರಕ್ಕೆ ಬಿದ್ದರೆ ...." ಇತ್ಯಾದಿಯಾಗಿ ಮಕ್ಕಳ ಮನಸ್ಸಿನ ಮುಂದೆ ಈ 'ಆದರೆ ಹೋದರೆ' ಮುಂಡಿಗೆಯನ್ನಿರಿಸಿದರೆ ಅವರು ಆಕಾಶ ಗೋಪುರ ಕಟ್ಟುವುದರಲ್ಲೇ ಕಾಲ ಕಳೆದರೆ ವಿಶೇಷವೇನಿಲ್ಲ.

ಇಲ್ಲಿ ಕೇಳಿ—

"ಒಂದು ನಗರದಲ್ಲಿ ಪ್ರತಿ ೧೦೦೦ ಗಂಡಸರಿಗೆ ೧೨೦೦ ಹೆಂಗಸರಿದ್ದಾರೆ. ಹಾಗಾದರೆ ೧೦೦೦ ಹೆಂಗಸರಿಗೆ ಎಷ್ಟು ಗಂಡಸರಾದಂತಾಯಿತು ?''

ಈ ರೀತಿಯ ಲೆಕ್ಕಗಳು ಎಳೆ ಮನಸ್ಸಿನ ಮೇಲೆ ಯಾವ ಪರಿಣಾಮ ಉಂಟುಮಾಡುವದೆಂದು ಪ್ರತ್ಯೇಕ ವಿವರಿಸಬೇಕಾಗಿಲ್ಲ.

ಸಮಾಜದಲ್ಲಿ ನೈತಿಕ ಪತನವಾಗಿದೆ. ಜೀವನದ ನೆಲೆ ಬೆಲೆಗಳು ಕುಸಿದಿವೆ. ಎಂಬಿತ್ಯಾದಿಯಾಗಿ ಹಲುಬುವವರು ಇಂದು ಶಾಲೆಯಲ್ಲಿ ಕಲಿಸಲ್ಪಡುತ್ತಿರುವ ಗಣಿತ ಶಾಸ್ತ್ರವು ಯಾವ ರೀತಿ ಸಮಾಜದ ಅಧಃಪತನಕ್ಕೆ ತನ್ನ ಪಾಲಿನ ಕೆಲಸ ಮಾಡುತ್ತಿದೆ ಯೆಂದು ಗಮನಿಸಬೇಕು.

"ಒಬ್ಬ ಕಂಟ್ರಾಕ್ಟರನು ೯೦ ದಿನಗಳಲ್ಲಿ ಒಂದು ಕಟ್ಟಡ ಕಟ್ಟುವಂತೆ ಒಪ್ಪಿ ೫೦ ದಿನಗಳಲ್ಲಿ ಕಟ್ಟಡದ ಐದನೇ ಎರಡಂಶ ಮಾತ್ರ ಪೂರ್ತಿಯಾದುದನ್ನು ಕಂಡು ಹೆಚ್ಚಿಗೆ ಕೆಲವರನ್ನು ಸೇರಿಸಿ ೯೦ ದಿನಗಳಲ್ಲಿ ಕೆಲಸ ಮುಗಿಸಿದನು. ಹೆಚ್ಚಿಗೆ ಸೇರಿಸಿದ ಕೆಲಸಗಾರರ ಸಂಖ್ಯೆ ಎಷ್ಟು ?" ಇದು ಇನ್ನೊಂದು ಮಾದರಿಯ ಲೆಕ್ಕ. ಇಂದು ಪ್ರಚಲಿತವಿರುವ ಸ್ಥಿತಿಗೂ ಈ ಲೆಕ್ಕಕ್ಕೂ ಎಷ್ಟೊಂದು ಅಂತರ ! ಯಾವುದೇ

146

ಕಂಟ್ರಾಕ್ಟರನು ನಿಶ್ಚಿತ ಸಮಯಕ್ಕೆ ಕೆಲಸ ಮುಗಿಸಿದ ನಿದರ್ಶನ ಇಂದಿನ ಕಾಲದಲ್ಲಿದೆಯೇ ?

ಇನ್ನೊಂದು ಉದಾಹರಣೆ. "ಒಬ್ಬನು ತನ್ನ ಮಾಸಿಕ ವೇತನದ ಶೇಕಡ ೧೦ರಷ್ಟು ದಾನ ಧರ್ಮಕ್ಕಾಗಿ ಕೊಡುತ್ತಿದ್ದನು. ಉಳಿದುದರಲ್ಲಿ ...." ಶೇಕಡ ೧೦ರಷ್ಟು ದಾನ ಧರ್ಮಕೊಡುವ ಮಾತಿರಲಿ; ನಮ್ಮ ಸಮಾಜದಲ್ಲಿ ತಿಂಗಳಿಗೆ ೧೦ ಪೈಸೆ ದಾನ ಕೊಡುವವರೆಷ್ಟಿದ್ದಾರೆ ? ಸಂಬಳದ ಶೇಕಡ ೧೦ರಷ್ಟು ದಾನ ಕೊಡುವವರಿದ್ದರೆ ಭಾರತದ ಸ್ಥಿತಿಗತಿ ಇಂದಿನಂತಿರುತ್ತಿತ್ತೆ ?

ಈ ರೀತಿ ನಮ್ಮ ಗಣಿತ ಶಾಸ್ತ್ರವು ಮಕ್ಕಳ ಮನಸ್ಸಿನ ಮೇಲೆ- ಹಿಟ್ಲರನ ಗೆಸ್ಟಪೋವಳ ಅಲ್ಲಿಯ ಜನರ ಮೇಲೆ ಮಾಡಿದ್ದಕ್ಕಿಂತಾ ಹೆಚ್ಚಿನ ಅನಾಹುತ ಮಾಡಿದೆ; ಮಾಡುತ್ತಿದೆ.

ಇದನ್ನು ಓದುವ ವಿದ್ಯಾರ್ಥಿಗಳೂ, ಅಧ್ಯಾಪಕರೂ ವಿಡಂಬನಾತ್ಮಕವಾದ ಈ ಬರೆಹದ ತಿರುಳನ್ನು ತಿಳಿದುಕೊಂಡರೆ ಅದೇ ನನ್ನ ಶ್ರಮಕ್ಕೆ ಮಾನ್ಯತೆ ಹಾಗೂ ಧನ್ಯತೆ !



ಕೊಡಗು ಜಿಲ್ಲಾ
ಸಹಕಾರ ಕೇಂದ್ರ ಬೇಂಕಿನ
ಪ್ರಗತಿಯ ಮತ್ತು ಮುನ್ನಡೆಯ ಸಂಕ್ಷಿಪ್ತ ನೋಟ

ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬೇಂಕು 1921ನೇ ಇಸವಿಯಲ್ಲಿ ಸಹಕಾರ ಕಾಯಿದೆಗೆ ಅನುಗುಣಗಾಗಿ ಸ್ಥಾಪನೆಗೊಂಡಿತು. 48 ಸಹಕಾರ ಸಂಘಗಳು ಮತ್ತು 16 ಬಿಡು ಮೆಂಬರುಗಳಿಂದ ಕೂಡಿ ರೂ. 4,400/- ಪಾಲು ಭಂಡವಾಳದಿಂದ ಸ್ಥಾಪನೆಗೊಂಡ ಬೇಂಕು ಇಂದು 423 ಸಹಕಾರ ಸಂಘ ಮತ್ತು 136 ಬಿಡು ಮೆಂಬರುಗಳಿಂದ ಕೂಡಿ ಇದರ ಪಾಲು ಭಂಡವಾಳವು ರೂ. 35 ಲಕ್ಷಕ್ಕೆ ಏರಿದೆ.

ಸ್ಥಾಪನೆಯ ಆರಂಭದ ವರ್ಷದಲ್ಲಿ ಈ ಬೇಂಕು ಕೇವಲ ರೂ. 11,000/-ವನ್ನು ಸಾಲವಾಗಿ ಸಹಕಾರ ಸಂಘಗಳಿಗೆ ಕೊಟ್ಟದ್ದಾಗಿದೆ. ಅನಂತರ ವರ್ಷದಿಂದ ವರ್ಷಕ್ಕೆ ಜಿಲ್ಲೆಯ ನುರಿತ ಸಹಕಾರಿಗಳ ದುಡಿಮೆಯಿಂದ ಪ್ರಗತಿಯ ಹಂತವನ್ನು ಏರುತ್ತಾ ಮೈಸೂರು ರಾಜ್ಯದಲ್ಲಿಯೇ ಜಿಲ್ಲಾ ಬೇಂಕುಗಳ ಪೈಕಿ ದ್ವಿತೀಯ ಸ್ಥಾನವನ್ನು ಮತ್ತು ಪಾರಿತೋಷಕವನ್ನು ಪಡೆದ ಹೆಗ್ಗಳಿಕೆಯನ್ನು ಪುಟ್ಟ ಜಿಲ್ಲೆಯಾದ ಕೊಡಗು ಹಾಗೂ ಬೇಂಕು ಹೊಂದಿದೆ.

ಹಿಂದಿನ ವರ್ಷದಲ್ಲಿ ರೂ. 1 ಕೋಟಿ 51 ಲಕ್ಷ ಫಸಲು ಎತ್ತಾವಳಿ ಸಾಲವಾಗಿ ಕೊಡಲಾಗಿದ್ದು ಸಕಾಲದಲ್ಲಿ ಮಳೆಯು ಒದಗದೆ ಅಪೇಕ್ಷಿಸಿದ ಮೊತ್ತದಷ್ಟು ಸಾಲವು ವಸೂಲಾಗದೆ ಸಂಘಗಳಿಂದ ರೂ. 39 ಲಕ್ಷ ವಾಯಿದೆ ಮೀರಿದ ಸಾಲವಾಗಿರುತ್ತದೆ. ಹಾಗಿದ್ದರೂ ಕೂಡ ಈ ವರ್ಷದಲ್ಲಿ ರೂ. 1 ಕೋಟಿ 71 ಲಕ್ಷ ನೀಡಲಾಗಿದೆ. ಹೆಚ್ಚಿನ ಸಂಘಗಳು ವಾಯಿದೆ ಮೀರಿದ ಬಾಕಿದಾರರಾದ ಕಾರಣ ವರದಿ ವರ್ಷದಲ್ಲಿ ಸಕಾಲಕ್ಕೆ ಹಣವನ್ನು ಸಂಘಗಳಿಗೆ ನೀಡುವಲ್ಲಿ ಅಲ್ಪ ಸ್ವಲ್ಪ ವಿಳಂಬವಾಗಲು ಕಾರಣವಾಗಿದೆ. ಸಂಘಗಳು ವಾಯಿದೆ ಮೀರಿದ ಬಾಕಿದಾರರಾದರೂ ಕೂಡ ಗೊಬ್ಬರ ವಗೈರೆ ಹಲವಾರು ರಿಯಾಯಿತಿಯನ್ನು ಕೊಟ್ಟು ಸಾಧ್ಯವಾದಷ್ಟು ಹಣವನ್ನು ಒದಗಿಸಿ ಬಡ ರೈತಾಪಿಗಳ ನೆರವಿಗೆ ಬೇಂಕು ಬಂದಿದೆ. ಮುಂದಿನ ವರ್ಷದಲ್ಲಿ ಸಂಘಗಳು ವಾಯಿದೆ ಮೀರಿದ ಬಾಕಿದಾರರಾದರೂ ಕೂಡ ಸಾಲವನ್ನು ಪೂರ್ತಿಯಾಗಿ ಮರುಪಾವತಿ ಮಾಡಿರತಕ್ಕ ಮೆಂಬರುಗಳಿಗೆ ಸಾಲವನ್ನು ಒದಗಿಸುವ ಏರ್ಪಾಡನ್ನು ಆಲೋಚಿಸಲಾಗುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಸುಮಾರು 1400 ಎಕ್ರೆಗಳಲ್ಲಿ ಅನನಾಸು ಬೆಳೆಯುವ ಯೋಜನೆಯನ್ನು 3 ವರ್ಷಗಳ ಅವಧಿಯಲ್ಲಿ ಪೂರೈಸುವ ಸಲುವಾಗಿ ನಿರ್ಧಾರವನ್ನು ಕೈಕೊಂಡು ಅನನಾಸು ವ್ಯವಸಾಯ ಕೈಗೊಳ್ಳುವವರಿಗೆ ಕೊಡಗು ಜಿಲ್ಲಾ ಸಹಕಾರ ಬೇಂಕಿನಿಂದ ಸಹಕಾರ ಸಂಘಗಳ ಮುಖಾಂತರ ವಿಶೇಷ ಗಿರ್ವಿ ಸಾಲವನ್ನು ಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆ.

ಅನನಾಸು ಬೆಳೆಯುವ ಸಲುವಾಗಿ ಏಕ್ರೆ 1ರ ರೂ. 3,400/- ರಂತೆ ಮಂಜೂರು ಮಾಡಲಾಗುವುದು. ಮಂಜೂರಾದ ಹಣವನ್ನು 2 ಕಂತುಗಳಲ್ಲಿ ತೋಟಗಾರಿಕೆ ಇಲಾಖೆಯ ಡೆಪ್ಯುಟಿ ಡೈರೆಕ್ಟರವರ ಅನುಮತಿಯನ್ನು ಅನುಸರಿಸಿ ಬಟವಾಡೆ ಮಾಡುವಂತೆ ನಿರ್ಧರಿಸಿದೆ. ಮೊದಲನೇ ವರ್ಷ ರೂ. 3,000/- ಮತ್ತು ಎರಡನೆಯ ವರ್ಷದಲ್ಲಿ ರೂ. 400/-ರಂತೆ ಕೊಡಲಾಗುವುದು. ಈ ಸಾಲವನ್ನು ಪಡಕೊಂಡ ತಾರೀಕಿನಿಂದ 3ನೇ ವರ್ಷದಲ್ಲಿ ರೂ. 2,500/- ಮತ್ತು ಬಡ್ಡಿ ಉಳಿದ ರೂ. 900/-ನ್ನು ನಾಲ್ಕನೆ ವರ್ಷದಲ್ಲಿ ಮರುಪಾವತಿ ಮಾಡಬೇಕು. ಮತ್ತು ಈ ಸಾಲವನ್ನು ಪರಭಾರೆಯಾಗದೆ ಸ್ಥಿರ ಆಸ್ತಿಗಳ ಗಿರ್ವಿ ಆಧಾರದ ಮೇಲೆ ಕೊಡಲಾಗುವುದು.

ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಮತ್ತು ಜಲವಸತಿಯುಳ್ಳ ಬಾವಿಗಳನ್ನು ಪಡೆದಿದ್ದರೂ ಸಹ ಆರ್ಥಿಕವಾಗಿ ಹಿಂದುಳಿದಿರುವ ರೈತರು ವಿದ್ಯುತ್ ಮೋಟಾರನ್ನು ಅಳವಡಿಸಿ ಜಮೀನು ಸಾಗುವಳಿ ಮಾಡಲು ಬೇಂಕಿನ ವತಿಯಿಂದ ಗ್ರಾಮಾಂತರ ಸಂಘಗಳ ಮುಖಾಂತರವಾಗಿಯೂ ರೂ. 2,000/- ಮೀರದಂತೆ ಮಧ್ಯಮಾವಧಿ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡಲು ಶಕ್ತರಾದ ರೈತರಿಗೆ, ಇದಕ್ಕಾಗಿಯೇ ನಿಯೋಜಿತವಾಗಿರುವ ನಿಯಮಗಳಿಗನುಸಾರವಾಗಿ ಕೊಡುವ ಏರ್ಪಾಡನ್ನು ಮಾಡಲಾಗಿದೆ. ಪಡಕೊಂಡ ಸಾಲಕ್ಕೆ ರೈತನು ವಿದ್ಯುತ್ ಮೋಟಾರನ್ನು ಈಡು ಮಾಡುವುದರೊಂದಿಗೆ ಸಾಲಿಯಾನ ಶೇಕಡಾ 7ರಂತೆ ಬಡ್ಡಿಯನ್ನು ವಾಯಿದೆ ಮೀರಿದ ಕಂತುಗಳಿಗೆ ಸಾಲಿಯಾನ ಶೇಕಡಾ 12ರಂತೆ ಸುಸ್ತಿ ಬಡ್ಡಿಯನ್ನು ಪಾವತಿಸಬೇಕಾಗಿದೆ.

ಮೇಲಿನ ಸಾಲದಲ್ಲಿ ಕೊಂಡುಕೊಂಡ ವಿದ್ಯುತ್ ಮೋಟಾರನ್ನು ಬಾವಿಗೆ ಅಳವಡಿಸಿ ಕಾರ್ಯ ಪ್ರವರ್ತಿಸುವ ವರೆಗಿನ ವಿಶಿಷ್ಟ ಖರ್ಚುಗಳನ್ನು ರೈತನೇ ಭರಿಸಬೇಕಾಗುತ್ತದೆ. ಮತ್ತು ಪ್ರಥಮ ಕಂತನ್ನು ವಿದ್ಯುತ್ ಮೋಟಾರು ಸ್ಥಾಪಿಸಲ್ಪಟ್ಟ ದಿನದಿಂದ ಸರಿಯಾಗಿ ಒಂದು ವರ್ಷಕ್ಕೆ ಮರುಪಾವತಿ ಮಾಡಬೇಕಾಗಿದೆ. ಈಗಲೇ ಡಿಮಾಂಡು ಡ್ರಾಫ್ಟಿನ ಮೂಲಕ ಹಿಂದೂಸ್ಥಾನದ ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ಹಣವನ್ನು ರವಾನಿಸುವ ಏರ್ಪಾಡನ್ನು ಕೈಕೊಂಡಿದೆ. ಇದರಿಂದ ಹಣವನ್ನು ಅಲ್ಪವೆಚ್ಚದಿಂದ ರವಾನಿಸಲು ಸಾಧ್ಯವಾಗುವುದು.

ದಿನದಿಂದ ದಿನಕ್ಕೆ ಬೇಂಕಿನ ಪ್ರಗತಿಯು ಮುಂದುವರಿಯುತ್ತಲಿರುವುದರಿಂದ ಸಹಕಾರಿಗಳಿಗೂ ಮತ್ತು ಇತರ ಜನ ಸಮೂಹಕ್ಕೂ ಎಲ್ಲಾ ವಿಧದ ಬೇಂಕಿಂಗ್ ವ್ಯವಸ್ಥೆಯನ್ನು ಮುಂದಕ್ಕೆ ಕಲ್ಪಿಸಿ ಕೊಡುವ ಯೋಜನೆಯನ್ನು ಮುಂದಕ್ಕೆ ಕೈಕೊಳ್ಳುವ ನಿರೀಕ್ಷೆ ಇದೆ.

ಗ್ರಾಮಾಂತರ ಜನರಿಗೆ ಬೇಂಕಿಗೆ ಸೌಲಭ್ಯಗಳು ದೊರಕುವಂತೆ ಮಾಡಲು ಈಗಾಗಲೇ ಬೇಂಕಿನ ಎರಡು ಶಾಖೆಗಳನ್ನೂ ತೆರೆಯಲಾಗಿದೆ ಮತ್ತು ಇನ್ನು ಮುಂದಕ್ಕೂ ಅವಶ್ಯವಿದ್ದಲ್ಲಿ ಶಾಖೆಗಳನ್ನು ತೆರೆದು ಅದರಿಂದ ಹೆಚ್ಚಿನ ಮಟ್ಟಿಗೆ ಪ್ರಯೋಜನವನ್ನು ಪಡೆಯುವುದರೊಂದಿಗೆ, ಸಹಕಾರಿಗಳೆಲ್ಲರೂ ತಮ್ಮ ಉಳುವರಿ ಹಣವನ್ನು ಬೇಂಕಿನ ಮುಖ್ಯ ಕಛೇರಿಯಲ್ಲಾಗಲಿ ಅಥವಾ ಶಾಖೆಯಲ್ಲಾಗಲಿ ನಿರಖು ಠೇವಣಿಯನ್ನು ಇಡುವರೆಂದು ಆಶಿಸಲಾಗಿದೆ.

ಹೊರ ಜಿಲ್ಲೆಯಿಂದ ಬರುವ ಸಹಕಾರಿಗಳಿಗೂ ಮತ್ತು ಜಿಲ್ಲೆಯಲ್ಲಿರುವ ಸಹಕಾರಿಗಳಿಗೂ, ಪ್ರಯೋಜನವಾಗುವ ದೃಷ್ಟಿಯಿಂದ ಸಹಕಾರಿ ಅತಿಥಿ ಗೃಹವನ್ನು ಬೇಂಕಿನ ವತಿಯಿಂದ ತೆರೆಯಲಾಗಿದೆ. ಇದರ ಪ್ರಯೋಜನವನ್ನು ಸಹಕಾರಿಗಳೆಲ್ಲರೂ ಪಡೆಯುತ್ತಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಪಿ. ಎಂ. ಉತ್ತಪ್ಪ, ಬಿ.ಎ.,ಎಲ್.ಟಿ.,
ಪ್ರೆಸಿಡೆಂಟ್.

ಭಾರತೀಯ ಶಿಕ್ಷಣ ನೀತಿಯ ವಿಚಾರವಾಗಿ

ಸ್ವಾಮಿ ವಿವೇಕಾನಂದರು

ನೀಡಿದ ಆದರ್ಶ

ಲೇಖಕ:— ಎದುರ್ಕಳ ಕೆ. ಶಂಕರನಾರಾಯಣ ಭಟ್,
ಉಪಾಧ್ಯಾಯರು, ಭಾಗಮಂಡಲ.

ಒಂದು ರಾಷ್ಟ್ರದ ಶಿಕ್ಷಣ ಪದ್ಧತಿಯು ಆ ರಾಷ್ಟ್ರವನ್ನು ಸರ್ವಾಂಗೀಣವಾದ ಆರೋಗ್ಯದ ಶಿಖರಕ್ಕೆ ಏರಿಸಲೂ ಸಮರ್ಥವಾಗುತ್ತದೆ— ಹಾಗೆಯೇ ಪದ್ಧತಿ ಹಾಳಾದುದಾಗ ರೋಗ ಸಂಕಷ್ಟಗಳ ಕೂಪಕ್ಕೆ ತಳ್ಳಲೂ ಸಾಮರ್ಥ್ಯಪೂರ್ಣವಾಗತ್ತದೆ. ಭಾರತದಲ್ಲಿ ಇಂದು ಉದ್ಭವಿಸಿರುವ ಸಾಮಾಜಿಕ ರಾಜಕೀಯ ಇತ್ಯಾದಿ ಹಲವಾರು ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರ ದೊರೆಯಲು ಆದರ್ಶವಾದ ಶಿಕ್ಷಣ ಹಾಗೂ ಶಿಕ್ಷಣ ಪದ್ಧತಿಯಿಂದ ಮಾತ್ರ ಸಾಧ್ಯ ಎನ್ನುವುದು ಎಲ್ಲರೂ ಒಪ್ಪುವ ಅಂಶವೇ ಆಗಿರುತ್ತದೆ.

ಶಿಕ್ಷಣ ಮತ್ತು ಶಿಕ್ಷಣ ಪದ್ಧತಿಗಳಲ್ಲಿ ಶಿಕ್ಷಣವು ಶಕ್ತಿಯಾದರೆ ಪದ್ಧತಿಯು ಶಕ್ತಿಯನ್ನು ಪ್ರಕಾಶಕ್ಕೆ ತರುವ ಕ್ರಮ ಎಂದು ತಾತ್ಪರ್ಯವಾಗಿ ಹೇಳಬಹುದು. ಒಂದು ಬೆಂಕಿಯಾದರೆ ಮತ್ತೊಂದು ಅದನ್ನು ಉಪಯೋಗಿಸುವ ಕ್ರಮ ಆಗಿರುತ್ತದೆ. ರಾಷ್ಟ್ರದಾದ್ಯಂತ ನಾವು ಇಂದು ವಿದ್ಯಾವಂತರು, ವಿದ್ಯಾ ಬೋಧಕರು- ವಿದ್ಯಾ ಶಾಲೆಗಳು ಎಂದು ಬಹು ಸಂಖ್ಯೆಯಲ್ಲಿ ಕಾಣಲು ಸಾಧ್ಯವಿದೆ. ಹಾಗೆಯೇ ವಿದ್ಯಾ ಕ್ಷೇತ್ರದಲ್ಲಿ ಅಶಿಸ್ತು, ಅವ್ಯವಸ್ಥೆಗಳು ಉದ್ಭವವಾಗಿ ಸಮಗ್ರ ವಿದ್ಯಾ ಕ್ಷೇತ್ರದಲ್ಲಿನ ವ್ಯವಸ್ಥೆಗಳು ಬಹುಪಾಲು ಯಾಂತ್ರಿಕ ಹಾಗೂ ವ್ಯಾವಹಾರಿಕ ಎಂಬಂತಾಗಿರುವುದನ್ನೂ ಗ್ರಹಿಸಲು ಕಷ್ಟವೇನಿಲ್ಲ. ವಿದ್ಯಾರ್ಥಿ ಮತ್ತು ಅಧ್ಯಾಪಕ, ಶಿಕ್ಷಣದ ವಿಷಯ ಮತ್ತು ವಿದ್ಯಾರ್ಥಿ, ಶಿಕ್ಷಣ ಮತ್ತು ಅಧ್ಯಾಪಕ ಈ ಅಂಶಗಳ ಒಳಗೆ ಪರಸ್ಪರ ಇರಬೇಕಾದ ಅನ್ಯೋನ್ಯತೆ – ಹಾರ್ದಿಕತೆ, ಇವುಗಳ ಬದಲಿಗೆ ಕೆಲವು ಪಾಲು ಅವ್ಯವಸ್ಥೆ ವ್ಯಾವಹಾರಿಕತೆ, ಯಾಂತ್ರಿಕತೆಗಳು ನೆಲೆಗೊಂಡಿವೆ. ಸತ್ಯ, ಧರ್ಮ, ಗುರುಹಿರಿಯರಲ್ಲಿ ಭಕ್ತಿ, ಆತ್ಮ ವಿಶ್ವಾಸ ಇತ್ಯಾದಿ ಬಾಳಿನ ಮೂಲ ಸತ್ವಾಂಶಗಳು ಇಂದು ವಿದ್ಯಾರಂಗದಲ್ಲಿ ನಿಸ್ತೇಜ ಹಾಗೂ ಆಕರ್ಷಣ ಶೂನ್ಯವಾಗುತ್ತಾ ಬರುತ್ತಿವೆ. ಕಲಿಸುವವರಿಗೆ— "ಸಂಬಳ ದೊರೆಯುತ್ತದೆ— ಅದಕ್ಕಾಗಿ ಕಲಿಸುವುದು". ಕಲಿಯುವವರಿಗೆ— "ಕಲಿಸುವವರು ಇದ್ದಾರೆ, ಕಲಿಸುತ್ತಾರೆ". "ಕಲಿಸುವವರನ್ನು ನೇಮಿಸಲಾಗಿದೆ— ಕಲಿಸುತ್ತಾರೆ" ಎಂಬ ಕೀಳು ಮನೋಭಾವನೆ ವಿದ್ಯಾರಂಗದಲ್ಲಿ ಇಂದು ಪ್ರಬಲ

ವಾಗಿ ಬೆಳೆಯ ಹತ್ತಿರುತ್ತದೆ. ಪರಿಣಾಮವಾಗಿ ವಿದ್ಯಾರ್ಥಿ ದಶೆಗೂ ಗೃಹಸ್ಥದಶೆಗೂ, ವಿದ್ಯಾ ಕ್ಷೇತ್ರಕ್ಕೂ ಬಾಳಿನ ಕ್ಷೇತ್ರಕ್ಕೂ— ವಿದ್ಯೆಗೂ ಜೀವನಕ್ಕೂ ಏನೇನೂ ಸಂಬಂಧವಿಲ್ಲ ಎಂಬಂತಾಗಿದೆ. ಮಹಾತ್ಮಾ ಗಾಂಧೀಜಿಯವರು ಶ್ರೀರಾಮಚಂದ್ರ ದೇವರ ಪರಮ ಭಕ್ತರಾಗಿದ್ದರು. ಅದರಂತೆ ಗೀತಾ ಗ್ರಂಥ ಅವರ ಪಾಲಿಗೆ ಸ್ವಂತ ತಾಯಿಯೇ ಆದಂತಿತ್ತು ಎಂದು ಶಾಲೆಯಲ್ಲಿ ಅಧ್ಯಾಪಕರ ಬೋಧನೆಯ ಮೂಲಕ ಪಠ್ಯ ಪುಸ್ತಕಗಳ ಮೂಲಕ ತಿಳಿದ ವಿದ್ಯಾರ್ಥಿಯು ಮನೆಗೆ ತೆರಳಿದಾಗ ಅದನ್ನು ಮರೆಯುವಂತಹ ಪರಿಸ್ಥಿತಿ ಸನ್ನಿವೇಶಗಳಿಗೆ ಸಿಲುಕಿ ಮತ್ತೆ ಪುನಃ ವಿರುದ್ಧ ಸಂಸ್ಕಾರಗಳನ್ನು ಸಂಗ್ರಹಿಸಿಕೊಂಡು ಮರಳಿ ಮಾರನೆ ದಿನ ಶಾಲೆಗೆ ಬರುತ್ತಾನೆ. ಪರಿಣಾಮವಾಗಿ ಶಾಲೆಯಲ್ಲಿ ಕಲಿಯುವ ವಿಷಯಗಳಿಗೂ ದೈನಂದಿನ ಬಾಳಿಗೂ ಯಾವ ಸಂಬಂಧವೂ ಇಲ್ಲ ಎಂಬಂತಾಗಿ ವಿಷಯಗಳು ಕೇವಲ ಪರೀಕ್ಷಾ ದೃಷ್ಟಿಯಿಂದ ಬಾಯ್ದೆರೆ ಮಾಡುವಂತಾಗುತ್ತದೆ. ದಿನದ ಇಪತ್ನಾಲ್ಕು ಘಂಟೆಗಳಲ್ಲಿ ಮುಕ್ಕಾಲು ಅಂಶದಷ್ಟು ಕಾಲ ಮಗುವು ಅಧ್ಯಾಪಕರ ಆಶ್ರಯದಿಂದ ಹೊರಗಿದ್ದು ಬರೇ ಕಾಲು ಭಾಗದಷ್ಟು ಕಾಲ ಮಾತ್ರ ವಿದ್ಯಾ ಮಂದಿರದಲ್ಲಿ ಇರುವಂತಾದ್ದರಿಂದ ಅಧ್ಯಾಪಕರು ಮಗುವಿನ ವಿಚಾರದಲ್ಲಿ ಹೆಚ್ಚಿನ ಶ್ರಮವಹಿಸಲು ಆಗದಿರುವುದು ಒಂದಂಶವಾದರೆ ವಿದ್ಯಾರ್ಥಿ ಅಧ್ಯಾಪಕರ ಒಳಗೆ ಸ್ವಾಭಾವಿಕವಾಗಿ ಯಾಂತ್ರಿಕವಾದ ಸಂಬಂಧ ಏರ್ಪಡುವುದು ಇನ್ನೊಂದು ಅಂಶವಾಗಿದೆ. ಕಲಿಸುವ ವಿಷಯ, ಕಲಿಸುವ ಅವಧಿ ವಿದ್ಯಾರ್ಥಿಯ ಅರ್ಹತೆಯನ್ನು ಅಳೆಯುವ ಜವಾಬ್ದಾರಿ ಇತ್ಯಾದಿ ಅಂಶಗಳು ಬೇರೆಯವರ ಅಂಕೆ ಯಲ್ಲಿದ್ದು ಅಧ್ಯಾಪಕನು ಅಂಕೆಯೊಳಗೊಂದು ಅಧೀನ ಯಂತ್ರದಂತೆ ಇರಬೇಕಾಗುತ್ತದೆ. ಹಾಗಾಗಿ ಅಧ್ಯಾಪಕನೂ ಸಹ ಬಹುಮಟ್ಟಿಗೆ ಅನಿವಾರ್ಯವಾಗಿ ಯಂತ್ರದಂತಾಗುತ್ತಾನೆ. ವಿದ್ಯಾರ್ಥಿಯು ದಿನದ ಬಹುಪಾಲು ಸಮಯವನ್ನು ತನ್ನ ಮನೆಯಲ್ಲಿ ಅಥವಾ ಶಾಲೆಯ ಹೊರಗಣ ವಾತಾವರಣದಲ್ಲೇ ಕಳೆಯುತ್ತಾನಾದ್ದರಿಂದ ಅಧ್ಯಾಪಕನು ವಿದ್ಯಾರ್ಥಿಗೆ 'ಆದರ್ಶ' ಎಂದು ಗ್ರಹಿಕೆಗೇ ಬರುವುದಿಲ್ಲ. ಬದಲು ವಿಷಯಗಳನ್ನು ಸಂಗ್ರಹಿಸಿ ತಿಳಿಸುವ ಒಂದು ಜೀವಂತ ಯಂತ್ರ ಎಂದು ತಿಳಿಯಲ್ಪಡುವಂತಾಗುತ್ತದೆ. ಅಧ್ಯಾಪಕರು, ವಿದ್ಯಾರ್ಥಿ ಜೀವನ, ವಿದ್ಯಾ ವಿಷಯ ಇವುಗಳು ಪರಿಣಾಮವಾಗಿ ವಿದ್ಯಾರ್ಥಿಗೆ ಕೇವಲ ವಿಷಯ ಸಂಗ್ರಹವಾಗಿಯೇ ಉಳಿಯುತ್ತವೆ ವಿನಾ ಬದುಕಿನ ಶ್ರೇಯಸ್ಸಿನ ಸಾಧನೆಗೆ ಸಹಕಾರಿಯಾದ ಸತ್ವವಾಗಿ ಪರಿಣಮಿಸುವುದಿಲ್ಲ. ಭಾರತದಲ್ಲಿ ಇಂದು ಶಿಕ್ಷಣ ಕ್ಷೇತ್ರದಲ್ಲಿ ಬಹುಪಾಲು ಈ ದೌರ್ಭಾಗ್ಯದ ಸ್ಥಿತಿ ಇದೆ ಎನ್ನುವುದು ನಿಜಕ್ಕೂ ಅಹಿತವಾದ ಅಂಶವಾಗಿದೆ. ಈ ಅವ್ಯವಸ್ಥೆ ಅಳಿಸಿ ಸುವ್ಯವಸ್ಥೆಯನ್ನು ಸ್ಥಿತೀಕರಿಸಲು ರಾಷ್ಟ್ರದ ಉದ್ದಗಲಕ್ಕೂ ಎಂಬಂತೆ ಹರಡಿರುವ ಮೂಲ ಶಿಕ್ಷಣ ಪದ್ಧತಿಯು ಇನ್ನೂ ಕೂಡ ಹಲವಾರು ಕಾರಣಗಳಿಂದಾಗಿ ಪುಸ್ತಕದ ಕನ್ನಂಬಾಡಿಕಟ್ಟೆ ಚಿತ್ರದಂತೆಯೇ ಉಳಿದಿದೆ ಎಂದು ವಿಷಾದ ದಿಂದ ಹೇಳದೆ ಗತ್ಯಂತರವಿಲ್ಲ.

ಭಾರತೀಯ ಶಿಕ್ಷಣ ಪದ್ಧತಿಯ ಲೋಪದೋಷಗಳನ್ನು ಕಂಡುಕೊಂಡ ವಿಶ್ವೇಶ್ವರರಾದ ಸ್ವಾಮಿ ವಿವೇಕಾನಂದರು ಶಿಕ್ಷಣ ಪದ್ಧತಿಯ ಸುಧಾರಣೆಗಳ ಬಗೆಗೆ ಹೇಳಿದ ಮಾತುಗಳು ಇದೀಗ ನಿಜಕ್ಕೂ ಎಲ್ಲರೂ ಪರಿಶೀಲಿಸಿ ಅನುಸರಿಸಬೇಕಾದ ವಿಚಾರವಾಗಿದೆ. ಸ್ವಾಮಿ ವಿವೇಕಾನಂದರು ಭಾರತಕ್ಕೆ ಎಂತಹ ಶಿಕ್ಷಣ ಪದ್ಧತಿ ಬೇಕು ಎನ್ನುತ್ತಾ ''ಶಿಕ್ಷಣದ ಬಗೆಗೆ ನನ್ನ ಅಭಿಪ್ರಾಯವು ಗುರುಕುಲವಾಸವೇ ಆಗಿದೆ. ಅಧ್ಯಾಪಕರ

ವೈಯಕ್ತಿಕ ಜೀವನವಿಲ್ಲದೆ ಶಿಕ್ಷಣವು ಬೆಳಗಲು ಸಾಧ್ಯವೇ ಇಲ್ಲ'' ಎಂಬುದಾಗಿ ಹೇಳಿರುತ್ತಾರೆ. ಅದೇ ವಿಚಾರವಾಗಿ ಸ್ವಾಮೀಜಿಯವರು ಸ್ಪಷ್ಟಪಡಿಸುತ್ತಾ ''ತನ್ನ ಬಾಲ್ಯದಿಂದಲೇ ಅತ್ಯಂತ ಪ್ರಕಾಶಮಾನವಾದ ಪ್ರಜ್ವಲ ಅಗ್ನಿಯಂತೆ ಇರುವ ಶೀಲವುಳ್ಳವನೊಡನೆ ಬಾಳಿ ತನ್ನ ಮುಂದೆ ಅತ್ಯಂತ ಉಚ್ಚ ಮಟ್ಟದ ಶಿಕ್ಷಣದ ಆದರ್ಶವನ್ನು ವಿದ್ಯಾರ್ಥಿಯು ಪಡೆದಿರಬೇಕು. ಭಾರತದಲ್ಲಿ ಶಿಕ್ಷಣವನ್ನು ಹಿಂದೆ ತ್ಯಾಗ ಜೀವಿಗಳ ಮೂಲಕವೇ ನೀಡಲ್ಪಡುತ್ತಿತ್ತು. ಮತ್ತೀಗ ಅದು ಪುನಃ ತ್ಯಾಗಿಗಳ ಹೆಗಲ ಮೇಲೆಯೇ ಬೀಳಬೇಕು'' ಎಂದು ಸ್ವಾಮೀಜಿಯವರು ಹೇಳಿರುತ್ತಾರೆ.

ಕಲಿಸುವ ವ್ಯಕ್ತಿ, ಕಲಿಸುವ ವಿಷಯ, ಕಲಿಯುವ ವ್ಯಕ್ತಿ ಈ ಮೂರಂಶವೂ ಪರಿಶುದ್ಧ ಹಾಗೂ ಯೋಗ್ಯಪೂರ್ಣವಾಗಿರಬೇಕು ಎನ್ನುವುದು ಎಲ್ಲರೂ ಗಮನಿಸಬೇಕಾದ ಅಂಶವಾಗಿರುತ್ತದೆ. ವಿದ್ಯಾರ್ಥಿಗಳು ಹೇಗಿರಬೇಕು ಎನ್ನುತ್ತಾ ಸ್ವಾಮಿ ವಿವೇಕಾನಂದರು "ಹಿಂದೆ ವಿದ್ಯಾರ್ಥಿಗಳು ಗುರುವಿನ ಎಡೆಗೆ ಕೈಯಲ್ಲಿ ಕಟ್ಟಿಗೆಯನ್ನು ತೆಗೆದುಕೊಂಡು ತೆರಳುತ್ತಿದ್ದು ಗುರುವು ಶಿಷ್ಯನ ಯೋಗ್ಯತೆಯನ್ನು ಗ್ರಹಿಸಿ ಅಂಗೀಕರಿಸುತ್ತಿದ್ದನು. ಶ್ರದ್ಧೆ, ವಿನಯ, ಶರಣಾಗತಿ, ಭಾವನೆ, ಗೌರವ ಇವುಗಳು ಗುರುವಿನ ಬಗೆಗೆ ವಿದ್ಯಾರ್ಥಿಯಲ್ಲಿ ಇಲ್ಲದಿದ್ದರೆ ಯಾವ ಬೆಳವಣಿಗೆಯೂ ಆಗಲು ಸಾಧ್ಯವಿಲ್ಲ. ಯೋಚನೆ, ವಚನ ಮತ್ತು ಕಾರ್ಯ ಇವುಗಳಲ್ಲಿ ಪರಿಶುದ್ಧತೆ, ವಿದ್ಯೆಯ ಬಗೆಗೆ ನಿಜವಾದ ಬಯಕೆ, ಸ್ವಪ್ರಯತ್ನಗಳು ವಿದ್ಯಾರ್ಥಿಗಳಲ್ಲಿ ಅಗತ್ಯವಾಗಿ ಇರಬೇಕಾದ ಅಂಶವಾಗಿದೆ." ಎಂದು ಹೇಳಿದ ಸ್ವಾಮೀಜಿಯವರು ಈ ರೀತಿಯಲ್ಲಿ ವಿದ್ಯಾರ್ಥಿಗಳು ಬೆಳೆದು ಬರದಿದ್ದರೆ ಏನಾಗುತ್ತದೆ ಎಂಬುದಕ್ಕೆ ಉತ್ತರವೋ ಎಂಬಂತೆ ಹೇಳುತ್ತಾ ''ಅಧ್ಯಾಪಕನು ಕೇವಲ ಭಾಷಣಕಾರನಾಗುತ್ತಾನೆ. ಅವನು ಸಂಬಳವನ್ನು ನಿರೀಕ್ಷಿಸುವವನಾಗುತ್ತಾನೆ. ವಿದ್ಯಾರ್ಥಿಯು ಅಧ್ಯಾಪಕರ ಮಾತುಗಳಿಂದ ತನ್ನ ಮಿದುಳನ್ನು ತುಂಬಿಸಿಕೊಳ್ಳುವುದು ಅಷ್ಟೇ ಎಂಬ ದೃಷ್ಟಿಯವನಾಗಿ ಕೊನೆಗೆ ಇಷ್ಟಾದ ನಂತರ ಈರ್ವರೂ ತಮಗಿಷ್ಟ ಬಂದಂತೆ ತಮ್ಮ ದಾರಿಯಲ್ಲಿ ನಡೆಯುವವರಾಗುತ್ತಾರೆ" ಎಂದು ಹೇಳಿ ಎಚ್ಚರಿಕೆಯನ್ನು ನೀಡಿರುತ್ತಾರೆ.

ಇಂದಿನ ಅಧ್ಯಾಪಕರು ಸರಿ ಇಲ್ಲ ಎನ್ನುವ ಮಾತು ಎಲ್ಲೆಲ್ಲೂ ಕೇಳಬರುತ್ತಿದೆ. ನಿಜಕ್ಕೂ ಈ ಮಾತಿನಲ್ಲಿ ಅಸತ್ಯದೊಡನೆ ಸ್ವಲ್ಪ ಮಟ್ಟಿಗೆ ನ್ಯಾಯಾಂಶವೂ ಕೂಡ ಇದೆ ಎನ್ನುವುದರಲ್ಲಿ ಎರಡಭಿಪ್ರಾಯವಿಲ್ಲ. ಅಧ್ಯಾಪಕ – ಶಿಷ್ಯ – ಶಿಕ್ಷಣ, ಶಿಕ್ಷಣ ವ್ಯವಸ್ಥೆ ಸನ್ನಿವೇಶ ಯಾವುದೂ ಹಿಂದಿನಂತೆ ಆದರ್ಶವಾಗಿ ಇಲ್ಲದಿರುವುದರಿಂದ ಈ ಪರಿಸ್ಥಿತಿ ಬಹುಪಾಲು ಉಂಟಾಗಿದೆ ಎನ್ನಬಹುದು. ಈ ಐದು ಅಂಶಗಳು ಒಂದನ್ನೊಂದು ಬಿಟ್ಟಲ್ಲ— ಹಾಗೂ ಒಂದು ಅಡಿ ತಪ್ಪಿದರೆ ಎಲ್ಲವೂ ಅವ್ಯವಸ್ಥೆ ಆದಂತೆಯೇ ಸರಿ ಎನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ. ಶಿಕ್ಷಣ ರಂಗದಲ್ಲಿರುವ ಇಂದಿನ ವಿದ್ಯಾರ್ಥಿ ಮುಂದೆ ಬೆಳೆದು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಅಧ್ಯಾಪಕನಾಗುವವನಿದ್ದಾನೆ. ಹಾಗಾಗಿ ಶಿಕ್ಷಣರಂಗದ ಸುಧಾರಣೆಯು ಒಂದೇ ಸಮನಾಗಿ ಈ ಐದು ಅಂಶಗಳ ದೃಷ್ಟಿಯಿಂದಲೂ ಆಗಬೇಕು. ನಿಜವಾದ ಅಧ್ಯಾಪಕನು ಯಾರು ಎನ್ನುತ್ತಾ ಸ್ವಾಮಿ ವಿವೇಕಾನಂದರು ಹೇಳಿದ ಮಾತುಗಳು ಅಧ್ಯಾಪಕರೆಲ್ಲರಿಗೂ ತಮ್ಮ ತಮ್ಮ ಉದ್ಯೋಗ ಜೀವನದ ಗಾಯತ್ರಿಯಂತಿದೆ.

"ವಿದ್ಯಾರ್ಥಿಯ ಮಟ್ಟಕ್ಕೆ ತಕ್ಷಣ ಬಂದು ತನ್ನ ಆತ್ಮವನ್ನು ವಿದ್ಯಾರ್ಥಿಯ ಆತ್ಮಕ್ಕೆ ವರ್ಗಾಯಿಸಿ ಅವನ ಮನಸ್ಸಿನ ಮೂಲಕ ವಿಷಯಗಳನ್ನು ಗ್ರಹಿಸುವುದು; ಅವಲೋಕಿಸುವುದು ಇವುಗಳನ್ನು ಮಾಡಬಲ್ಲವನೇ ನಿಜವಾದ ಅಧ್ಯಾಪಕ. ಜ್ಞಾನವು ಮನುಷ್ಯನಲ್ಲಿ ಅಂತರ್ಗತವಾಗಿದೆ ಎಂದು ವೇದಾಂತ ಹೇಳುತ್ತದೆ. ಮಗುವಿನಲ್ಲೂ ಕೂಡ ಹಾಗೆಯೇ ಸರಿ. ಆದರೆ ಅದಕ್ಕೆ ಕೇವಲ ಜಾಗ್ರತಗೊಳಿಸುವುದು ಮಾತ್ರ ಆವಶ್ಯಕವಾಗಿರುತ್ತದೆ. ಅಧ್ಯಾಪಕನು ಪಥದ ವಿಘ್ನಗಳನ್ನು ನಿವಾರಿಸಬಹುದು— ಜ್ಞಾನವು ತನ್ನಷ್ಟಕ್ಕೆ ತಾನೇ ಪ್ರಕಟಗೊಳ್ಳುತ್ತದೆ. ಹಾಗೆ ಮಗುವು ತನ್ನಷ್ಟಕ್ಕೆ ತಾನೇ ವಿದ್ಯಾವಂತವಾಗುತ್ತದೆ." ಎಂಬುದಾಗಿ ಸ್ವಾಮಿ ವಿವೇಕಾನಂದರು ಘೋಷಿಸಿರುತ್ತಾರೆ.

ಭಾರತದ ರಾಷ್ಟ್ರೀಯ ಶಿಕ್ಷಣ ನೀತಿ ಹೇಗಿರಬೇಕು ಎಂಬ ಪ್ರಶ್ನೆ ಇನ್ನೂ ಕೂಡ ಪ್ರಶ್ನೆಯಾಗಿಯೇ ಉಳಿದಿದೆ. ನಿಶ್ಚಿತವಾದ ನಿರ್ಧಾರಕ್ಕೆ ಇನ್ನೂ ತಲಪಿದಂತಿಲ್ಲ. ಸ್ವಾಮಿ ವಿವೇಕಾನಂದರು ಈಗ ಆರು ದಶಕ ವರ್ಷಗಳ ಹಿಂದೆ ಈ ಕುರಿತಾಗಿ ಹೇಳಿದ ಮಾತುಗಳು ಇಂದಿಗೂ ಹೊಸದಾಗಿವೆ. "ಸಾಧ್ಯವಾದಷ್ಟು ಮಟ್ಟಿಗೆ ರಾಷ್ಟ್ರದ ಆಧ್ಯಾತ್ಮಿಕ ಮತ್ತು ಲೌಕಿಕ ಶಿಕ್ಷಣವು ರಾಷ್ಟ್ರೀಯ ಮಟ್ಟದಲ್ಲಿ ಒಂದೇ ಆಗಿದ್ದು ರಾಷ್ಟ್ರೀಯ ಪದ್ಧತಿಯ ಮೂಲಕ ನೀಡಲ್ಪಡಬೇಕು. ನಮ್ಮ ದೇಶದ ವಿಚಾರ ಶಿಕ್ಷಣದ ಜೊತೆಗೆ ಇಂಗ್ಲಿಷ್ ಭಾಷೆ, ಪಾಶ್ಚಿಮಾತ್ಯ ವಿಜ್ಞಾನ ಇವುಗಳು ನಮಗೆ ಬೇಕೇಬೇಕು. ನಮಗೆ ತಾಂತ್ರಿಕ ಶಿಕ್ಷಣ ಹಾಗೂ ಕೈಗಾರಿಕೆಯನ್ನು ವೃದ್ಧಿಪಡಿಸುವ ಎಲ್ಲಾ ಶಿಕ್ಷಣಗಳೂ ಬೇಕಾಗಿವೆ. ಇದರಿಂದ ಜನರು ಉದ್ಯೋಗದ ವಿಚಾರವಾಗಿ ಪರಾವಲಂಬಗಳು ಆಗುವುದರ ಬದಲಿಗೆ ಸ್ವಾವಲಂಬಿಗಳೂ, ಮಿತವ್ಯಯಿಗಳೂ, ಆಗಿ ಬದುಕುವಂತಾಗುತ್ತದೆ." ಎಂದು ಸ್ವಾಮಿ ವಿವೇಕಾನಂದರು ಮಾರ್ಗದರ್ಶಕ ನುಡಿಯನ್ನು ನೀಡಿರುತ್ತಾರೆ. ಅವರ ದಿವ್ಯ ನುಡಿಗಳು ನಮಗೆಲ್ಲರಿಗೂ ನವ ಭಾರತದ ನಿರ್ಮಾಣ ಕಾರ್ಯದಲ್ಲಿ ಪಥದರ್ಶಕ ನುಡಿಜ್ಯೋತಿಯಾಗಿ ಪರಿಣಮಿಸಲಿ.

|| ಹರಿಃ ಓಂ ತತ್ಸತ್ ||

153

ಸ್ವಾರ್ಥ - ಸಹಕಾರ - ಶಿಕ್ಷಣ

ಲೇಖಕ:— ಎನ್. ಎಸ್. ನಾರಾಯಣ,
ಮುಖ್ಯಾಧ್ಯಾಪಕ, ಸರಕಾರೀ ಉನ್ನತ ಪ್ರಾಥಮಿಕ ಶಾಲೆ,
ಮಡಿಕೇರಿ.

ಜನನ ಮತ್ತು ಮರಣಗಳು ಜೀವನದ ಆದಿ ಮತ್ತು ಅಂತ್ಯಗಳು ಅಥವಾ ಜನನ ಮರಣಗಳ ನಡುವಣ ಕಾಲವೇ ಜೀವನ ಕಾಲ. ಜನನ ಮರಣಗಳ ಪರಿಣಾಮ ವೈಯಕ್ತಿಕ ಜೀವನದ ಮೇಲೆ ಪ್ರಭಾವ ಬೀರುತ್ತವೆ. ಬೇರೆ ಬೇರೆಯಾಗಿ ಜನಿಸಿ ಬೇರೆ ಬೇರೆಯಾಗಿ ಮರಣ ಹೊಂದುವುದು ಪ್ರಕೃತಿ ನಿಯಮದ ಅಡಿಗಲ್ಲು. ತಾನು, ತನ್ನದು ಇತರರಿಗಿಂತ ಮೇಲು ಎಂದೂ ತಾನು, ತನ್ನದು, ತನಗಾಗಿ, ತನ್ನ ಉಳಿವು ಅಳಿವುಗಳಿಗಾಗಿ ಎಂಬ ಜಾಗೃತ ಶಕ್ತಿ ಜೀವನದುದ್ದಕ್ಕೂ ಜಾಗೃತವಾಗಿಯೇ ಇರುವುದರಿಂದ ಲೌಕಿಕ, ಪಾರಮಾರ್ಥಿಕ ವಿಚಾರಗಳೆಲ್ಲವೂ "ಸ್ವ" ಮೂಲವಾಗಿಯೇ ಇಂದಿಗೂ ಬೆಳೆದು ಬಂದಿವೆ. ಯಾವ ಕಾರ್ಯವಾದರೂ 'ಸ್ವ' ಮೂಲವಾಗಿಯೇ ಇರುವುದು ಪ್ರಕೃತಿ ನಿಯಮವಾಗಿದ್ದು, ಮಾನವ ಇಲ್ಲವೆ ಪ್ರಕೃತಿಯ ಸಮಸ್ತ ಜೀವರಾಶಿಯ ಚಟುವಟಿಕೆಯ ಕೇಂದ್ರ, ಸ್ವಾರ್ಥವಾಗಿರುತ್ತದೆ. ಏನು ಮಾಡಿದರೂ ಏಕೆ ಮಾಡಿದರೂ ಹೇಗೆ ಮಾಡಿದರೂ ಮಾಡತಕ್ಕ ಕೆಲಸದ ಕೇಂದ್ರ ಬಿಂದು ತಾನು ಎಂಬ ಮೂಲ ನಿಯಮ ನಿತ್ಯ ಸತ್ಯ. ಸ್ವಾರ್ಥವನ್ನು ಬಿಟ್ಟರೆ— ಬಿಡಲಾರೆವು— ಜೀವನ ನಿಸ್ಸಾರ, ಪ್ರಪಂಚ ಶೂನ್ಯ. ಪ್ರಕೃತಿ ದತ್ತವಾದ ಮೂಲ ಪ್ರವೃತ್ತಿಗಳು ಹಲವಾರು ಇದ್ದು, ಪ್ರತಿಯೊಂದು ಪರಸ್ಪರ ಪೂರಕವಾಗಿದರೂ, ಸಮಾನ ಪ್ರಧಾನವಾಗಿ ಕಂಡುಬಂದರೂ ಸಕಲ ಪ್ರವೃತ್ತಿಗಳ ಅಡಿಗಲ್ಲು ಸ್ವಾರ್ಥ. ತನ್ನನ್ನು ಕೇಂದ್ರದಲ್ಲಿರಿಸಿಕೊಂಡು ಪ್ರಪಂಚದ ಆಗು-ಹೋಗುಗಳ ವಿಮರ್ಶೆ ಮಾಡತಕ್ಕ ವಿಚಾರ, ಮಾನವನ ಸ್ಥಾನಮಾನಗಳನ್ನಾಗಲೀ ವಯೋಧರ್ಮವನ್ನಾಗಲೀ ಕಾಲದೇಶಗಳನ್ನಾಗಲೀ ಅವಲಂಬಿಸಿರದೆ ಎಲ್ಲಾ ಹಂತಗಳಲ್ಲಿಯೂ ಏಕಮುಖ ವಾಗಿ ಪ್ರವಹಿಸುತ್ತಿರುತ್ತದೆ. ಇಂತಹ ಸ್ವಾರ್ಥ ಮೂಲ ಪ್ರಕೃತಿಯಲ್ಲಿ ಅನಾದಿ ಕಾಲದಿಂದಲೂ ಹುಟ್ಟಿ ಬೆಳೆಯುತ್ತಿರುವ ಮಾನವ ಸಮಾಜವಂತೂ ಎಂದೂ ಪೂರ್ಣ ಸೌಹಾರ್ದಯುತ ಸಮಾಜ ನಿರ್ಮಾಣವನ್ನು ಸಾಧಿಸುವಲ್ಲಿ ಸಾರ್ಥಕತೆ ಪಡೆಯಲಿಲ್ಲ. ಅಂತಹ ನಿಸ್ವಾರ್ಥಮಯ ಸಮಾಜ ನಿರ್ಮಾಣ ಸಾಧಿಸಿದೆವು ಎಂದರೆ ಸತ್ಯಕ್ಕೆ ಅಪಚಾರವಾದಂತೆ.

ಆದರೆ ಹಾಗೆಂದು ಕೈಚೆಲ್ಲಿ ಕುಳಿತಿರುವುದಂತೂ ಅತ್ಯಂತ ಹಿರಿಯ ಬುದ್ಧಿಜೀವಿ ಅನ್ನಿಸಿಕೊಳ್ಳುತ್ತಿ ರುವ ಮಾನವ ಜೀವಿಗೆ ಅಸಾಧ್ಯ ವಿಚಾರವಾಗುಳಿಯಿತು. ವ್ಯಕ್ತಿಗತ ಸ್ವಾರ್ಥವನ್ನು ಕೌಟುಂಬಿಕ ಸ್ವಾರ್ಥ

ವಾಗಿ ಪರಿವರ್ತಿಸಿಕೊಳ್ಳುವುದು ಒಂದು ಕಾಲದಲ್ಲಿ ಅನಿವಾರ್ಯವಾಗಿರಬೇಕು. ಸ್ವಾರ್ಥ ಪ್ರವೃತ್ತಿಯಂತೆಯೇ ಅದಮ್ಯ ಚೇತನದಾಯಿಯಾದ ಪ್ರವೃತ್ತಿಸಂಘ ಪ್ರವೃತ್ತಿ. ತನ್ನ ಪೀಳಿಗೆ ಮುಂದುವರಿಯಬೇಕೆಂಬ ಅದಮ್ಯ ಬಯಕೆ ಅಥವಾ ಸ್ವಾರ್ಥದಿಂದ, ಪ್ರಜನನ ನಿಯಮಕ್ಕೆ ಅಪವಾದವಾಗಿರಲಾರದೆ ಪ್ರಕೃತಿ ಪುರುಷ ಸಂಯೋಗ ಅನಿವಾರ್ಯವಾಗಿ ಕೌಟುಂಬಿಕ ಸ್ವಾರ್ಥ ವೈಯಕ್ತಿಕ ಸ್ವಾರ್ಥದ ಅಡಿಗಲ್ಲ ಮೇಲೆ ತಲೆಯೆತ್ತಿ ನಿಂತಿತು. ತಾನೇ ಕೇಂದ್ರವಾಗಿದ್ದು ತನ್ನ ಕುಟುಂಬ ಪ್ರತಿಷ್ಠೆಗಾಗಿ ಪ್ರಕೃತಿಯಂತಹ ಮಹಾನ್ ಶಕ್ತಿಯೊಡನೆ ಹೋರಾಡುವುದಂತೂ ಸರ್ವೇ ಸಾಮಾನ್ಯ ವಿಚಾರವಾಯಿತು. ಇದರಿಂದ ಸ್ವಾಭಾವಿಕವಾಗಿ ಸ್ಪರ್ಧೆಗಳು ಜೀವನ ನಾಟಕದ ರಂಗಮಂಟಪವನ್ನೇರಿದುವು.

ವ್ಯಕ್ತಿಗತವಾದ ಕೌಟುಂಬಿಕವಾದ ಸ್ಪರ್ಧೆಗಳು ಬೆಳೆಯುತ್ತಾ ಬಂದಂತೆ ಪ್ರತಿಸ್ಪರ್ಧಿಯ ಅಪಜಯದಲ್ಲಿ ತನ್ನ ಜಯವನ್ನು ಕಂಡಾಗ, ಔದಾರ್ಯ ಪ್ರದರ್ಶನ ಮಾಡಿ ಪ್ರತಿಸ್ಪರ್ಧಿಯನ್ನು ತನ್ನ ಋಣಿಯನ್ನಾಗಿಸಿ ತನ್ನ ಹೆಚ್ಚಳವನ್ನು ಸಾಧಿಸುವ ರೂಪದಲ್ಲಿ ಸ್ವಾರ್ಥ ಪ್ರದರ್ಶನ ನಡೆಯಿತು. ಇಂತಹ ಸಮಾನ ಧರ್ಮವನ್ನು ಸಾಧಿಸಿದ, ಸಮಾನ ಗುಣಗಳಿದ್ದ ಕೆಲವು ವ್ಯಕ್ತಿಗಳು, ಕುಟುಂಬಗಳು ಒಂದಾಗಿ ಸಮಾಜಗಳಾದುವು. ಆಗಲೇ ಸಹಕಾರವೆಂಬ ಸ್ವಭಾವ ಮಾನವನಲ್ಲಿ ಜಾಗೃತವಾಗಿರಬೇಕು. ವೈಯಕ್ತಿಕ ಸ್ವಾರ್ಥ ಸಾಧನೆಗಾಗಿಯೇ ಸಾಮೂಹಿಕವಾದ ಯತ್ನ ನಡೆದು ಸಾಮೂಹಿಕ ಸ್ವಾರ್ಥ ಸಾಧನೆ ಸಾಧ್ಯವಾಯಿತು. ಸಾಮೂಹಿಕ ಸ್ವಾರ್ಥ ಸಾಧನೆಯ ಸಾಧನೆಗಳಾಗಿಯೇ ರಾಜ್ಯಗಳಾಗಿಯೋ ರಾಷ್ಟ್ರಗಳಾಗಿಯೋ ಮಾನವ ಸಮಾಜ ಪರಿವರ್ತಿತವಾಯಿತು.

ಕೆಲವರು ಔದಾರ್ಯ ಪ್ರದರ್ಶನದ ಮೂಲಕ ತಮ್ಮ ಹೆಚ್ಚಳವನ್ನು ಸಾಧಿಸುವ ಸ್ವಾರ್ಥದಿಂದ, ಕೆಲವರು ತಮ್ಮ ಶಾರೀರಕ ಹಾಗೂ ಬೌದ್ಧಿಕ ಶಕ್ತಿಯನ್ನು ಇತರರ ಮೇಲೆ ಹೇರಿ ಪಡೆಯುವ ಕ್ರೂರ ಆನಂದದ ಅಭಿಲಾಷೆಯಿಂದ ಸಮಾದ ಸಾಮೂಹಿಕ ಹಿತಾಭಿವೃದ್ಧಿಯ ಸೋಗನ್ನು ಹಾಕಿದರೆ ಕೆಲವರು ಅಂತಹ ಪ್ರಭಾವಶಾಲಿಗಳ ಬೆಂಬಲಿಗರಾಗಿಪಡೆಯಬಹುದಾದ ಲೌಕಿಕ ಲಾಭದ ಸ್ವಾರ್ಥದಿಂದ, ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಬಹುದಾದ ಅಪ್ರಕಟಿತ ಅಭಿಲಾಷೆಯಿಂದ ಇಂತಹ ಸಮಾಜ ನಿರ್ಮಾಣಕ್ಕೆ ನೆರವಾದರೆ, ಕೆಲವರು ಲೈಂಗಿಕ ತೃಪ್ತಿಗಾಗಿ, ಉಪಜೀವನಕ್ಕಾಗಿ, ಇತ್ಯಾದಿ ಇತ್ಯಾದಿ ಗಣ್ಯ ಅಗಣ್ಯ ವಿಚಾರ ಮೂಲ ಪ್ರಭಾವಗಳಿಂದ ಸಮಾಜ ನಿರ್ಮಾಣಕ್ಕೆ ಕಾರಣರಾದರು.

ಅಂತಹ ಮಾನವ ವಿಚಾರ ಧಾರೆ ಬೆಳೆದುದು ವಿಚಾರಶಕ್ತಿಯಿಂದಲ್ಲ. ಕೇವಲ ಪ್ರಾಕೃತಿಕವಾಗಿ. ಇದು ಮಾನವ ಜೀವಿಗೆ ಮಾತ್ರ ಸೀಮಿತವಾಗಿದೆಯೆಂದರೆ ತಪ್ಪಾಗಲಾರದು. ಉಳಿದ ಜೀವರಾಶಿಯಲ್ಲಿ ಸಹಕಾರ ಮನೋಭಾವನೆ ಗೋಚರವಾದರೂ ನಿಯಮಿತ ಕ್ಷೇತ್ರ, ಕಾಲಗಳ ಚೌಕಟ್ಟಿನೊಳಗೆ; ಲೈಂಗಿಕ ತೃಪ್ತಿ, ಮಾತೃತ್ವದ ಕರ್ತವ್ಯಗಳು, ಪ್ರಜನನದ ಅಗತ್ಯ ಅನಗತ್ಯಗಳ ಎಲ್ಲೆಯೊಳಗೆ ಸೀಮಿತವಾಗಿವೆ. ಆದರೆ ಯಾವುದೇ ಹಂತವಾಗಿರಲಿ, ಪಂಗಡವಾಗಿರಲಿ, ಯಾವುದೇ ಉದ್ದೇಶವಿರಲಿ, ಸ್ವಾರ್ಥ ಸಾಧನೆಯ ಕಾರ್ಯದಲ್ಲಿ ಅವರ್ಣನೀಯ ಹೇಯ ಕೃತ್ಯಗಳು ನಡೆದಿವೆ, ನಡೆಯುತ್ತಲಿವೆ, ಹೀಗೆಯೇ ಮುಂದುವರಿಯುತ್ತಿದ್ದರೆ ಮುಂದೆ ನಡೆಯುತ್ತಲಿರಲೂಬಹುದು.

ಪ್ರಕೃತಿ ಸಹಜವಾಗಿಯೇ ಆದರೂ ಸ್ವಾರ್ಥಮೂಲವಾಗಿಯೇ ಆದರೂ ಸಹಕಾರಯುತವಾಗಿ

ಬೆಳೆದ ಸಂಘ ಜೀವನವು ಅನಿವಾರ್ಯವಾದಂತೆ ಮಾನವನಲ್ಲಿ ಬೌದ್ಧಿಕ ವಿಕಾಸವು ಗಣನೀಯವಾಗಿ ಬೆಳೆಯಿತು. ಸಹಕರಿಸುವುದು, ಸಹಕರಿಸಿ ಬಾಳುವುದು ಅನಿವಾರ್ಯವೆಂಬ ಅಗೋಚರ ಸತ್ಯ ಹೊಳೆದು, ಸ್ವಾರ್ಥಕ್ಕೆದುರಾಗಿ ಸಹಕಾರವೆಂಬ ದೈವೀಶಕ್ತಿ ಪ್ರಾದುರ್ಭಾವ ಹೊಂದಿತು. ಸಂಘವೇ ಸರ್ವ ಕಾರ್ಯಗಳ ಮೂಲಶಕ್ತಿಯೆಂಬ ಅರಿವು ಬಂದಾಗ "ಸಹಕಾರ" ಎಂಬ ಪದವು ಜೀವನದ ತಾರಕ ಮಂತ್ರವಾಯಿತು. ಕಷ್ಟಸುಖಗಳಲ್ಲಿ ವ್ಯಕ್ತಿ ವ್ಯಕ್ತಿಗೆ ಸಮಾಜ-ಸಮಾಜಕ್ಕೆ ಸಹಕಾರ ನೀಡುವುದು ಬಳಕೆಯಾಯಿತು. ಜೀವನದಲ್ಲಿ ಸಹಕಾರವೆಂಬ ಪ್ರವೃತಿ ಹಾಸುಹೊಕ್ಕಾಯಿತು. ಜೀವನದ ಅಗತ್ಯಗಳನ್ನು ಪೂರೈಸಲು ವಿನಿಮಯ ವಿಧಾನ ಬಳಕೆಗೆ ಬಂತು. ಪರಿಣಾಮವಾಗಿ ಜೀವನದ ಹಕ್ಕು ಬಲಿಷ್ಠನದೊಬ್ಬನದೇ ಆಗಿರದೆ ಬಲಿಷ್ಠ ಬಲಹೀನರೆಲ್ಲರ ಹಕ್ಕಾಗಿ ಪರಿವರ್ತನೆ ಹೊಂದಿತು. ವೈಜ್ಞಾನಿಕ ಕ್ಷೇತ್ರದಲ್ಲಿ ಪ್ರಗತಿಯಾದಂತೆ ಸಹಕಾರದ ಅರ್ಥವೂ ವಿಶಾಲವಾಯಿತು, ಜೀವನದ ಸಕಲ ಕ್ಷೇತ್ರಗಳಲ್ಲಿಯೂ ವಿರಾಟರೂಪದಿಂದ ಪಸರಿಸಿಕೊಂಡಿತು.

ಇಷ್ಟಾದರೂ ಮೂಲ ಶಕ್ತಿಯಾದ ಸ್ವಾರ್ಥವು ತೆರೆಯ ಮರೆಯಲ್ಲಿ ಕುಣಿದು ಕುಪ್ಪಳಿಸುವುದು, ತನ್ನ ರಾಕ್ಷಸೀ ಚೈತನ್ಯವನ್ನು ಅಗೋಚರವಾಗಿಯೇ ಬೀರುವುದು ನಡೆಯುತ್ತಲೇ ಇದೆ. ಶತ ಪ್ರತಿಶತ ಸ್ವಾರ್ಥದಮನವಾಗದಿದ್ದರೂ ಸಹಕಾರವೆಂಬ ಜಾಗ್ರತ ಚೈತನ್ಯ ಬಹುಮಟ್ಟಿಗೆ ಲೋಕದ ಸಂಕಟ ನಿವಾರಣೆ ಮಾಡುತ್ತಿದೆ. ಉಳಿದ ಸಂಕಟ ನಿವಾರಣೆಯೇ ನಮ್ಮ ಮುಂದೆ ಉಳಿದಿರುವ ಬೃಹತ್ ಪ್ರಶ್ನೆ. ಇಂದಿನ ತನಕ ಸಾಧಿಸಿದ ಭಾಗ ಒಂದೆರಡು ಹಗಲು ರಾತ್ರೆಗಳ ಸಾಧನೆಯಲ್ಲ; ಬದಲಾಗಿ ಮಾನವ ಜನಾಂಗದ ಪೂರ್ಣ ಚಾರಿತ್ರಿಕ ಸಾಧನೆ. ಅಂತೆಯೇ ಮುಂದಿರುವ ಬೃಹತ್ ಸಮಸ್ಯೆಯ ಪರಿಹಾರವೂ ಮುಂದಿನ ಜನಾಂಗದ ಅಧಿಕೃತ ಕಕ್ಷೆಯೊಳಗೆ ಅಡಕವಾಗಿರುತ್ತದೆ. ಯುಗಯುಗಳೇ ಬೇಕಾಗಬಹುದಾದರೂ ಮುಂದೊಂದು ದಿನ ಪರಿಹಾರ ಸಾಧ್ಯವೆಂಬುದಂತೂ ನಗ್ನ ಸತ್ಯ. ಅದಕ್ಕೇನಾಗಬೇಕು ?

ಸಹಜ ಪ್ರವೃತ್ತಿಗಳ ಉದಾತ್ತೀಕರಣಕ್ಕಾಗಿ ಮಾನವ ಜನಾಂಗ ಸಿದ್ಧವಾಗಬೇಕು. ಬುದ್ಧಿಶಕ್ತಿಯ ಸದುಪಯೋಗದಲ್ಲಿ ನಿರತವಾಗಬೇಕು. ಜೀವನದುದ್ದಕ್ಕೂ ಶಿಕ್ಷಾರ್ಥಿಯಾಗಿರುವುದೇ ಪ್ರಧಾನ ಹೆಜ್ಜೆ. ಇಂದಿನ ರೀತಿಯಲ್ಲಿ ಜೀವನಾವಧಿಯ ಕೆಲವಂಶವನ್ನು ಮಾತ್ರ ಶಿಕ್ಷಣಕ್ಕೆ ಮೀಸಲಾಗಿಸುವುದು ಸರಿಯಾದ ಕ್ರಮವಲ್ಲ. ಅಥವಾ ಸೀಮಿತವಾದ ಶಿಕ್ಷಣಾವಧಿಯಲ್ಲಿ ಕೇವಲ ಕೆಲವು ನಿರ್ದಿಷ್ಟ ವಿಷಯಗಳ ಸಾಧನೆಯಿಂದ ಶಿಕ್ಷಣ ಪೂರೈಸಿತೆನ್ನುವ ಮನೋಭಾವವಿರಬಾರದು. ಶಿಕ್ಷಣರಂಗ ಪ್ರತಿಯೊಬ್ಬ ಮಾನವನ ಪ್ರಧಾನ ಚಟುವಟಿಕೆಯ ಕೇಂದ್ರವಾಗಿರಬೇಕು. ಶಿಕ್ಷಾರ್ಥಿಯ ಪರಿಸರ ಅವನ ಮೇಲೆ ಪ್ರಭಾವ ಬೀರುವಂತಿರಬೇಕು. ಶಿಕ್ಷಣದ, ಪಠ್ಯಕ್ರಮ ಪ್ರವೃತ್ತಿಗಳ ಉದಾತ್ತೀಕರಣದ ಕೇಂದ್ರ ನೆಲೆಯಾಗಿರಬೇಕು. ಮಾನವ ಜನಾಂಗದ ಸಮಗ್ರ ಐಕ್ಯತೆಯೇ, ಕಲ್ಯಾಣವೇ ಗುರಿಯಾಗಿರಬೇಕು. ವೈಯಕ್ತಿಕ ಸ್ವಾರ್ಥ ಮೂಲವನ್ನು ಗಮನಲ್ಲಿರಿಸಿ ಸಮಷ್ಠಿ ಸ್ವಾರ್ಥ ಮೂಲವಾಗಿ ಪರಿವರ್ತಿಸುವ ಕಾರ್ಯದಲ್ಲಿ ಮಾನವನು ಯಶೋವಂತನಾದಾಗಲೇ ವಿಶ್ವ ಕಲ್ಯಾಣವಾದೀತು; ಸಾಮಾನ್ಯ ಮಾನವ ದೇವಮಾನವನಾಗಿ ಪ್ರಕೃತಿ ಮಾನವನ ದಾಸ್ಯವನ್ನು ಕೈಗೊಂಡೀತು. ಪ್ರಕೃತಿಮಾತೆಯಿತ್ತ ಸ್ವಾರ್ಥವೆಂಬ ಶಾಪ ಪರಿಹಾರವಾದೀತು. ಅದುವೇ ನಮ್ಮ ನಿಜ ಶಿಕ್ಷಣದ ಹೆಗ್ಗುರಿಯಾಗಲಿ !

ವಿದ್ಯಾರ್ಥಿ ಸಹಕಾರ ಸಂಘ

ಲೇಖಕ:— ಎಸ್. ಶಂಕರನಾರಾಯಣ ಭಟ್ಟ,
ವಿದ್ವಾನ್, B.A., B.Ed., ರಾ. ಭಾ. ಪ್ರವೀಣ.

ಇಂದಿನದು ಸಹಕಾರ ತತ್ವದ ಯುಗ. ಇತರರ ಸಹಕಾರವಿಲ್ಲದೆ ಬಾಳುವುದೇ ದುಸ್ತರವಾಗಿ ಇಂದು ಪರಿಣಮಿಸಿದೆ. ಸುಖದ ಸಾಧನಗಳು ಹಾಗೂ ಜೀವನದ ಅವಶ್ಯಕತೆಗಳು ಪ್ರಾಚೀನ ಕಾಲದಂತೆ ಸೀಮಿತವಾಗಿರದೆ, ಅಂದಿನ 'ಬೇಡ' ಇಂದಿನ 'ಬೇಕಿನ' ಸ್ಥಾನವನ್ನಾಕ್ರಮಿಸಿದೆ. ಹಿಂದೆ ಓದುವವನ —ಬರೆಯುವವನ ಕುರ್ಚಿ ಮೇಜುಗಳು ಆಡಂಬರದ ದ್ಯೋತಕವಾಗಿದ್ದರೆ ಇಂದು ಅನುಕೂಲತೆಯ ಮತ್ತು ಸೌಕರ್ಯದ ಸಾಧನಗಳಾಗಿವೆ. 'ರೇಡಿಯೋ' ಕೊಂಡುಕೊಳ್ಳುವಿಕೆ ಶ್ರೀಮಂತಿಕೆಯ ಪ್ರತೀಕವಾಗಿದ್ದುದು ಇಂದು ಜೀವನದಲ್ಲಿ ಜ್ಞಾನಾರ್ಜನೆಯ ಅಗತ್ಯವಸ್ತುವಾಗಿದೆ. ದಿನೇ ದಿನೇ ಹೆಚ್ಚುತ್ತಿರುವ ಇಂಥ ಜೀವನಾವಶ್ಯಕವಾದ ಭೌತಿಕ ಪದಾರ್ಥಗಳ ಬೇಡಿಕೆಗಳಿಂದ ಯಾವುದೇ ರಾಷ್ಟ್ರದಲ್ಲಿಯೂ ಸಹಕಾರ ತತ್ವವು ಪ್ರತಿಯೊಬ್ಬನ ಜೀವನದಲ್ಲಿ ಹಾಸುಹೊಕ್ಕಾಗಿದೆ. ತತ್ಪರಿಣಾಮವಾಗಿ ಹುಟ್ಟನಿಂದ ಸಾಯುವ ತನಕ ಅದು ಬೇಕೇ ಬೇಕಾಗಿದೆ.

ಆದರೆ ಜಗತ್ತು ಶ್ರೀಮಂತ - ದರಿದ್ರರ, ಶಕ್ತ - ಅಶಕ್ತರ ಒಂದು ದೊಡ್ಡ ಸಮಾಜ. ಅದರಲ್ಲಿ ಆರ್ಥಿಕ, ಬೌದ್ಧಿಕ, ಶಾರೀರಿಕ ಹಾಗೂ ಸಾಮಾಜಿಕ ವಿಷಯಗಳಲ್ಲಿ ತಾರತಮ್ಯವಿವೆ. ಅದನ್ನು ಗಣನೆಗೆ ತೆಗೆದುಕೊಳ್ಳದೆ ಸಮಾನತೆಯನ್ನು ಸಾಧಿಸಿ, ವಸ್ತುವನ್ನು ಸಮಾನತೆಯಿಂದ ಉಪಯೋಗಿಸಿ, ಪ್ರಯೋಜನ ಪಡೆಯಬೇಕಿದ್ದರೆ ಸಹಕಾರ ಸಂಘಗಳ ಅವಶ್ಯಕತೆಯಿದೆ. ಬಡವ ಬಲ್ಲಿದರೆಂಬ ಅಂತರವನ್ನಿಟ್ಟುಕೊಳ್ಳದೆ ಎಲ್ಲ ವರ್ಗದ ವ್ಯಕ್ತಿಗಳೂ. ವಿಶೇಷವಾಗಿ ನಿಸ್ಸಹಾಯಕರು ಸೇರಿ ಶ್ರೀಮಂತರು ಹಾಗೂ ಶಕ್ತಿವಂತರು ಪಡೆಯುವ ಸೌಲಭ್ಯವನ್ನು ಹೊಂದಲಿಕ್ಕಾಗಿಯೇ ಈ ಸಹಕಾರ ಸಂಘಗಳ ಸೃಷ್ಟಿಯಾಯಿತು. ಹಾಗೆ ಇಂದು ವಿದ್ಯಾರ್ಥಿ ಸಹಕಾರ ಸಂಘ, ಉಪಾಧ್ಯಾಯರ ಸಹಕಾರ ಸಂಘ, ವ್ಯಾಪಾರಸ್ಥರ ಸಹಕಾರ ಸಂಘ, ಕಾರ್ಮಿಕರ ಸಹಕಾರ ಸಂಘ, ಕಾಫಿ ಬೆಳೆಯುವವರ ಸಹಕಾರ ಸಂಘ ಮುಂತಾದವು ಜನ್ಮ ತಾಳಿದುವು.

ಇಂದು ನಾವೆಲ್ಲರೂ ಪ್ರಜಾತಂತ್ರದ ಪ್ರಜೆಗಳಾಗಿ, ಅದನ್ನು ನಡೆಸುವ ಭಾರವನ್ನು ಹೆಗಲ ಮೇಲೆ ಧರಿಸಿ ಕೊಂಡಿದ್ದೇವೆ. ಆ ಪ್ರಜಾಪ್ರಭುತ್ವದ ವೃಕ್ಷ ಚಿಗುರಿ ಕುಸುಮಿಸಿ ಫಲಿಸಬೇಕಾದರೆ ಕರ್ತವ್ಯ ನಿರ್ವಹಣೆ ಯಲ್ಲಿ ಪಳಗಿದವರೂ, ನಿಪುಣರೂ ಆದ ನಾಗರಿಕ ಪ್ರಜೆಗಳು ಬೇಕು. ಅಂತಹ ಪ್ರಜೆಗಳನ್ನು ಸರ್ವತೋಮುಖವಾಗಿ ಪ್ರಗತಿ ಹೊಂದುವಂತೆ ರೂಪಿಸುವುದಕ್ಕೆ ಸಾಧನವೇ ವಿದ್ಯೆ. ಪ್ರಜಾಸತ್ತೆ ದಾಂಗುಡಿಯಿಡಲು ಬೇಕಾದುದು ಸಹಕಾರ. ಹೀಗೆ ಸಹಕಾರದ ಅಡಿಗಲ್ಲಿನ ಮೇಲೆ ರಾರಾಜಿಸುವ ಪ್ರಜಾಸತ್ತೆಗೆ ರಾಷ್ಟ್ರೀಯ ವಿದ್ಯೆ ಅಗತ್ಯವೆಂದಾಗ ಇಂದಿನ ವಿದ್ಯಾಭ್ಯಾಸದಲ್ಲಿ ಸಹಕಾರ ತತ್ವದ ಜ್ಞಾನ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಆದುದರಿಂದ ಶಾಲೆಗಳಲ್ಲಿ ವಿದ್ಯಾರ್ಥಿ ಸಹಕಾರ ಸಂಘಗಳ ಸ್ಥಾಪನೆ ಶೈಕ್ಷಣಿಕ ಹಾಗೂ ಸಾಮಾಜಿಕ ಜೀವನದ ಮೇಲ್ಮೆಯ ಗೊತ್ತುಗಂಬವಾಗಿದೆ.

ವಿದ್ಯಾರ್ಥಿ ಸಹಕಾರ ಸಂಘದ ಉದ್ದೇಶ ಸಾಮಯಿಕ ಸೌಲಭ್ಯ, ಶೈಕ್ಷಣಿಕ ವಿಚಾರ ಮತ್ತು ಜೀವನ ದರ್ಶನ ವೆಂಬ ಮೂರು ಮುಖಗಳನ್ನೊಳಗೊಂಡಿದೆ.

ವಿದ್ಯಾರ್ಥಿಗಳಿಗೆ ಅಗತ್ಯವಿರುವ ಪುಸ್ತಕ, ಸ್ಲೇಟು, ಸೀಸದ ಕಡ್ಡಿ, ಪೆನ್ನು ಮುಂತಾದವುಗಳನ್ನು ಎಲ್ಲ ವಿದ್ಯಾರ್ಥಿ ಗಳು ಯಾವ ಅಂತರವೂಇಲ್ಲದೆ ನ್ಯಾಯವಾದ ಬೆಲೆಯಲ್ಲಿ ಪಡೆಯಬಹುದು. ಕೆಲವೊಮ್ಮೆ ಅವರಿಗೆ ಅವಶ್ಯವಿರುವ ಕೇವಲ ಶಾಲೋಪಕರಣಗಳು ಮಾತ್ರವಲ್ಲದೆ ತಮ್ಮ ಮನೆಗಳಲ್ಲಿ ಬಳಸುವ ನಿತ್ಯೋಪ ಯೋಗೀ ಸಾಮಗ್ರಿಗಳನ್ನು ಮಾರುವ ಕೇಂದ್ರವನ್ನಾಗಿಯೂ ಆ ಸಹಕಾರೀ ಸಂಘವನ್ನು ಮಾಡಲಾಗು ತ್ತದೆ. ಅದರಿಂದಾಗಿ ಬಡವರಿಗೂ ದೂರದ ಮಾರುಕಟ್ಟೆಗಳಿಗೆ ಹೋಗದೇನೇ ಯೋಗ್ಯವಾದ ಬೆಲೆಗೆ ತಾವಿರುವ ಸ್ಥಳದಲ್ಲಿಯೇ ಬೇಕಾದ ವಸ್ತುಗಳು ಸಿಗುವ ಅನುಕೂಲತೆಯೊದಗಿದಂತಾಗುತ್ತದೆ. ಆದರೆ ಇದು ಎದುರಿಗೆ ಎದ್ದು ಕಾಣುವ ಸದ್ಯದ ಪ್ರಯೋಜನ ಮಾತ್ರ. ಇತರ ಉದ್ದೇಶಗಳ ಮೌಲ್ಯ ಮಾಪನದ ತುಲನಾತ್ಮಕ ದೃಷ್ಟಿಯಿಂದ ಈ ಉದ್ದೇಶ ಗೌಣವಾದುದಾಗಿದೆ.

ಶಿಕ್ಷಣದ ಕಡೆಗೆ ಮೊಗಮಾಡಿದರೆ ವಿದ್ಯಾರ್ಥಿ ಸಹಕಾರ ಸಂಘವು ಅತ್ಯಂತ ಉಪಯುಕ್ತವಾದುದು. ಮಕ್ಕಳಲ್ಲಿ ಕೆಲವು ಸಹಜ ಪ್ರವೃತ್ತಿಗಳಿರುತ್ತವೆ. ಅವುಗಳನ್ನು ಹತ್ತಿಕ್ಕುವುದೆಂದರೆ ವಿದ್ಯಾರ್ಥಿಯ ಸರ್ವಾಂಗೀಣ ವಾದ ಉನ್ನತಿಗೆ ಕೊಡಲಿಪೆಟ್ಟು ಹಾಕಿದಂತೆ. ಹತ್ತಿಕ್ಕದೇ ಹೋದರೆ ಅವುಗಳು ವ್ಯಕ್ತಿಯನ್ನು ವಾಮ ಮಾರ್ಗದಲ್ಲಿ ಕೊಂಡೊಯ್ಯುತ್ತವೆ. ಹಾಗೆ ಎರಡು ದಾರಿಗಳಿಂದಲೂ ತಿರುಗಿಸಿ ಋಜು ಮಾರ್ಗಾವಲಂಬಿ ಗಳನ್ನಾಗಿ ಮಾಡುವುದು ಶಿಕ್ಷಣದ ಮುಖ್ಯ ತತ್ವ. ನದಿಯಲ್ಲಿ ಹೇಗೋ ಎಂತೋ ಹರಿದು ಕೊಚ್ಚಿ ಕೊಂಡು ಹೋಗುವ ನೀರನ್ನು ಕಾಲುವೆಗಳ ಮೂಲಕ ಕೊಂಡು ಹೋಗಿ, ಅದರ ಉಪಯೋಗವನ್ನು ಸರಿಯಾದ ರೀತಿಯಲ್ಲಿ ಪಡೆಯುವಂತೆ ವಿದ್ಯಾರ್ಥಿಗಳನ್ನು ಅವರಿಗೆ ತಿಳಿಯದೆನೇ ಸರಿದಾರಿಗೆ ತರಲು ಈ ಸಹಕಾರ ಸಂಘ ನೆರವನ್ನೀಯುತ್ತದೆ. ಕುತೂಹಲ, ಕೂಡುಬಾಳ್ವೆ, ಸಂಪಾದನಾ ಶಕ್ತಿ ಮೊದಲಾದ ಪ್ರವೃತ್ತಿಗಳು ಫಲಕಾರಿಯಾಗಿ ಬೆಳೆಯುವಂತೆ ಅದು ಮಾರ್ಗದರ್ಶನ ಮಾಡುತ್ತದೆ.

ಸಹಕಾರ ಸಂಘಗಳಲ್ಲಿ ಲೆಕ್ಕಪತ್ರವನ್ನಿಡಲೇಬೇಕಾಗುತ್ತದೆಯಲ್ಲವೇ ? ಅದು ವಿದ್ಯಾರ್ಥಿಗಳಿಗೆ ಗಣಿತದಲ್ಲಿ

ಪ್ರಾಯೋಗಿಕ ಶಿಕ್ಷಣವಾಗಿ ಪರಿಣಮಿಸಿ, ಜ್ಞಾನಾಭಿವೃದ್ಧಿಗೆ ಅನುಕೂಲವಾಗುತ್ತದೆ. ಮಕ್ಕಳಿಗೆ ಶಾಲೆಯ ಹೊರಗಡೆ ಲೆಕ್ಕಪತ್ರವಿಡುವುದರಲ್ಲಾಗಲೀ, ಅದರ ಪರಿಶೋಧನೆ ನಡೆಸುವುದರಲ್ಲಾಗಲೀ ಹೊಣೆಗಾರಿಕೆ ಲಭಿಸುವುದು ತೀರ ವಿರಳವೇ ಸರಿ. ಅಂತಿರುವಾಗ ಸಹಕಾರ ಸಂಘ ಅವರಿಗೆ ಅದರಲ್ಲಿಯೂ ಭಾವೀ ಜೀವನಕ್ಕೆ ಉಪಯುಕ್ತವಾದ ಗಣಿತದ ಅರಿವನ್ನು ಮಾಡಿಕೊಡಲು ಸಮರ್ಥ ವಾಗುತ್ತದೆ. ಮಾತ್ರವಲ್ಲದೆ, ಲೆಕ್ಕವನ್ನು ಹೇಗಿಡಬೇಕು, ಜಮಾ ಖರ್ಚುಗಳ ತಖ್ತೆ ಹೇಗಿರಬೇಕು, ಅಂದಾಜು ಲೆಕ್ಕ ಹೇಗೆ ತಯಾರಿಸಬೇಕು ಇತ್ಯಾದಿ ಇತ್ಯಾದಿ ವಿಷಯಗಳು ತಾನಾಗಿಯೇ ಮಕ್ಕಳ ಕರಗತವಾಗುತ್ತದೆ. ಈಗ ಹಸ್ತಗತವಾದುದು ಮುಂದಿನ ಜೀವನದಲ್ಲಿ ಜೀವನ ಸಂಗಾತಿಯಾಗುತ್ತದೆ. ಅದರಿಂದ ಜೀವನ ಹಸನಾಗುತ್ತದೆ. ಇಂತಹ ಶೈಕ್ಷಣಿಕ ವಿಚಾರದ ಹಿನ್ನೆಲೆ ಶಾಲೆಗಳ ವಿದ್ಯಾರ್ಥಿ ಸಹಕಾರ ಸಂಘ ಸ್ಥಾಪನೆಯಲ್ಲಿ ಅಡಗಿದೆ.

ಇದಲ್ಲದೆ ವಿದ್ಯಾಭ್ಯಾಸವು ಜೀವನ ಶಿಕ್ಷಣವಾಗಿ ಬಾಳಿನಲ್ಲಿ ಪ್ರಯೋಜನಕಾರಿಯಾಗಬೇಕು. ವಿದ್ಯಾರ್ಥಿ ಸಹಕಾರ ಸಂಘ ಈ ತತ್ವವನ್ನು ಕಟ್ಟುನಿಟ್ಟಾಗಿ ನೆರವೇರಿಸುತ್ತದೆ. ವಿದ್ಯಾರ್ಥಿಗಳಿಗೆ ಚಿಕ್ಕಂದಿನಿಂದಲೇ ಸಂಘಜೀವನದ ಅಭ್ಯಾಸ, ಸಹಕಾರ ತತ್ವದ ತಿಳುಹು, ಪ್ರಾಮಾಣಿಕತೆಯ ರೀತಿ ಮೊದಲಾದುವುಗಳ ಪರಿಚಯು ಮಾಡಿಕೊಡುತ್ತದೆ. ಸಹಕಾರೀ ಸಂಘಕ್ಕೂ ಪ್ರಾಮಾಣಿಕತೆಗೂ ಅಂಟಿದ ನಂಟು. ಪ್ರಾಮಾಣಿಕತೆಯೇ ಅದರ ಬೆನ್ನೆಲುಬು. ಸಂಘವನ್ನು ಕಟ್ಟುವ ಕ್ರಮ, ಅದರ ಪ್ರಯೋಜನ, ಪ್ರಾಮಾಣಿಕತೆ, ಪರಸೇವೆಯ ಮೇಲ್ಮೆಗಳನ್ನು ವಿದ್ಯಾರ್ಥಿ ಅನುಭವದ ಮೂಲಕ ತಿಳಿದುಕೊಳ್ಳು ತ್ತಾನೆ. ಇಂದಿನ ವೈಜ್ಞಾನಿಕ ಜಗತ್ತಿನಲ್ಲಿ ಮಾನವ ಚೆನ್ನಾಗಿ ಬಾಳಿ ಬದುಕಬೇಕಾದರೆ ಅವನಲ್ಲಿ 'ತನ್ನಂತೆಯೇ ಪರರು', —'ವಸುದೈವ ಕುಟುಂಬಕಂ', —ಸಹ ಹಾಗೂ ಸಹಕಾರೀ ಜೀವನದ ಅರಿವು ಇರಬೇಕು. ಹಾಗಾದರೆ ಮಾತ್ರ ವ್ಯಕ್ತಿಗಳ ಮಧ್ಯೆ ವ್ಯಕ್ತಿಯಾಗಿ, ರಾಷ್ಟ್ರದಲ್ಲಿ ಸತ್ಪ್ರಜೆಯಾಗಿ, ಪ್ರಪಂಚ ದಲ್ಲಿ ನಾಗರಿಕನಾಗಿ ಬಾಳಿಯಾನು. ಸಹಕಾರ ತತ್ವದ ಗಂಧವೇ ಇಲ್ಲದೆ 'ತಾನೇ ತಾನಾಗಿ' ಜೀವಿಸುವ ವಿಚಾರ ಇಂದಿನ ವಿಶಾಲ ಪ್ರಪಂಚದಲ್ಲಿ ಬಾವಿಯೊಳಗಿನ ಕಪ್ಪೆಯ ಅನುಭವವೇ ಸರಿ.

ಅದರ ಮೇಲೆ ಇಂದು ಅಧಿಕಾರ ವಿಕೇಂದ್ರೀಕರಣದ ಆಡಳಿತದ ಕಹಳೆ ಎಲ್ಲೆಡೆ ಮೊಳಗುತ್ತಿರುವಾಗ ಎಲ್ಲೆಲ್ಲಿ ನೋಡಿದರೂ ಸಹಕಾರ ಸಂಘಗಳ ಯಾಜಮಾನ್ಯವೇ ದೃಗ್ಗೋಚರವಾಗುತ್ತದೆ. ಆದುದರಿಂದ ಮುಂದಿನ ಜನಾಂಗವಾದ ಇಂದಿನ ವಿದ್ಯಾರ್ಥಿಗೆ ಸಂಘ ಸಂಸ್ಥೆಗಳಿಗೆ ಸಂಬಂಧಿಸಿದ ಕಾರ್ಯಕಲಾಪಗಳ ಅನುಭವಜ್ಞಾನವಿಸುವುದು ಯುಕ್ತವೇ ಆಗಿದೆ. ಈ ನಿಟ್ಟಿನಲ್ಲಿಯೂ ಅವನಿಗೆ ಸಹಕಾರ ಸಂಘ ತಿಳುವಳಿಕೆ ಯನ್ನು ಮೂಡಿಸಿ, ಮುಂದಿನ ಆಡಳಿತದ ತರಬೇತಿಯನ್ನೀಯುವ ಕಾರ್ಯ ನಿರ್ವಹಿಸುತ್ತದೆ. ಈ ಎಲ್ಲ ದೃಷ್ಟಿಕೋನಗಳಿಂದ ಶಾಲೆಗಳಲ್ಲಿನ ವಿದ್ಯಾರ್ಥಿ ಸಹಕಾರ ಸಂಘಗಳು ಶಿಕ್ಷಣದ ಹಾಗೂ ಜೀವಿತದ ತರಬೇತಿಯ ಕೇಂದ್ರವಾಗಿವೆಯೆನ್ನಬಹುದು.

ಈ ತರಬೇತಿಯು ಅನುಭವಸ್ಥರೂ ಮಾರ್ಗದರ್ಶಕರೂ ಆದ ಅಧ್ಯಾಪಕರ ನೇತೃತ್ವದಲ್ಲಿ ಸಾಗಬೇಕೆಂಬುದನ್ನು

ಮಾತ್ರ ಎಂದೆಂದಿಗೂ ಮರೆಯಬಾರದು. ಅವರು ಸಂಘದ ಯಾವತ್ತೂ ಕೆಲಸಗಳನ್ನು ವಿದ್ಯಾರ್ಥಿಗಳಿಂದಲೇ ಮಾಡಿಸುವವರಾಗಿದ್ದು ತಾವು ದಕ್ಷರಾದ ಮೇಲುವಿಚಾರಕರಾಗಿ ವರ್ತಿಸಬೇಕು. ಸಂಘದ ಎಲ್ಲ ನಿರ್ವಹಣೆಯನ್ನು ಅವರು (ಅಧ್ಯಾಪಕರು) ತಾವೇ ಮಾಡಿದರೆ ಸಹಕಾರ ಸಂಘ ಸ್ಥಾಪನೆಯ ಉದ್ದೇಶವೇ ತಲೆಕೆಳಗಾದಂತೆಯೇ ಸರಿ.

ಹೀಗೆ ಶಾಲೆಗಳಲ್ಲಿ ವಿದ್ಯಾರ್ಥಿ ಸಹಕಾರ ಸಂಘಗಳು ತಮ್ಮ ನಿಜವಾದ ಉದ್ದೇಶದತ್ತ ಸಾಗಿದರೆ ವಿದ್ಯಾರ್ಥಿಗಳು ಅವುಗಳಿಂದ ಲಾಭ ಪಡೆದು ಪ್ರಜಾಪ್ರಭುತ್ವ ಬಯಸುವ ನಾಗರಿಕರಾಗಿ ಪ್ರಗತಿಹೊಂದುವುದನ್ನು ನಾವು ಕಾಣಬಹುದು.

ಭಾರತದ ಹಾಗೂ ಕೊಡಗಿನ ಗ್ರಾಮೀಣ ಜನರ ಉದ್ಧಾರ ಸಹಕಾರ ಸಂಘಗಳಿಂದಲೇ ಸಾಧ್ಯ: ಇದು ಹೇಗೆ? ಒಂದು ವಿವೇಚನೆ

ಲೇಖಕ:— ಡಿ. ಎನ್. ಕೃಷ್ಣಯ್ಯ, M.A., B.Ed.,
ನಿವೃತ್ತ ಮುಖ್ಯೋಪಾಧ್ಯಾಯ, ವಿರಾಜಪೇಟೆ.

ಭಾರತವು ಕೃಷಿಪ್ರಧಾನವಾದ ದೇಶ. ಆದುದರಿಂದ ಇಲ್ಲಿನ ಜನಸಂಖ್ಯೆಯಲ್ಲಿ ನೂರಕ್ಕೆ ಎಪ್ಪತ್ತಾರು ಮಂದಿ ರೈತರಾಗಿರುವರೆಂದು ಜನಗಣತಿ ಲೆಕ್ಕಗಳಿಂದ ತಿಳಿದು ಬಂದಿದೆ. ಭಾರತವು ಕೃಷಿ ಪ್ರಧಾನ ದೇಶವಾಗಿರುವುದಕ್ಕೆ ಕಾರಣ ಇಲ್ಲಿನ ನೆಲ ಹವಾಗುಣ ಮೊದಲಾದುವುಗಳು ಭೂಮಿಯಿಂದ ಬೆಳೆ ತೆಗೆಯುವುದಕ್ಕೆ ಅನುಕೂಲವಾಗಿರುವುದೂ, ಇಲ್ಲಿ ಖನಿಜ ಸಂಪತ್ತಿನ ಕೊರತೆಯಿರುವುದೂ ಆಗಿದೆ. ಹೀಗೆ ಭಾರತವು ಕೃಷಿಪ್ರಧಾನ ದೇಶವಾಗಿದ್ದರೂ ಇಲ್ಲಿನ ರೈತನ ಆರ್ಥಿಕ ಸ್ಥಿತಿಯು ಉತ್ತಮವಾಗಿಲ್ಲ. ಭಾರತದ ಹಾಗೂ ಕೊಡಗಿನ ರೈತರುಗಳಲ್ಲಿ ಹೆಚ್ಚಿನ ರೈತರು ಸಾಲಗಾರರಾಗಿದ್ದಾರೆ. ಅವರು ಹೀಗೆ ಸಾಲಗಾರರಾಗಿರುವುದು ನಿನ್ನೆ ಮೊನ್ನೆಯ ಕಥೆಯಲ್ಲ. ಅವರು ತಲೆತಲಾಂತರಗಳಿಂದ ಸಾಲಗಾರರಾಗಿದ್ದಾರೆ. ಅವರು ಸಾಲಗಾರರಾಗಿರುವುದಕ್ಕೆ ಅನೇಕ ಕಾರಣಗಳಿವೆ. ಆ ಕಾರಣಗಳಲ್ಲಿ ಕೆಲವು ಅವರ ಹಿಡಿತದಲ್ಲಿಲ್ಲದವಾಗಿವೆ. ಕೆಲವು ಅವರ ಹಿಡಿತಕ್ಕೊಳಪಟ್ಟಿದ್ದರೂ ಅವರಿಗೆ ಆ ಸಮಯದಲ್ಲಿ ಸಾಕಷ್ಟು ಮುಂದಾಲೋಚನೆ, ತಿಳುವಳಿಕೆ, ಹಿಡಿದ ಕೆಲಸದಲ್ಲಿ ನಿಷ್ಠೆ ಇಲ್ಲದ್ದರಿಂದ ಉಂಟಾದವಾಗಿವೆ. ಈ ಕಾರಣಗಳಿಗೆ ಉದಾಹರಣೆಗಳನ್ನು ಕೊಟ್ಟರೆ ಓದುಗರಿಗೆ ಅವು ಸ್ಪಷ್ಟವಾಗಬಹುದು.

ನಮ್ಮ ದೇಶದಲ್ಲಿ ನಾವು ವ್ಯವಸಾಯಕ್ಕೆ ಪ್ರಕೃತಿಯನ್ನೇ ಅಂದರೆ ಪ್ರಕೃತಿದತ್ತವಾದ ಮಳೆಯನ್ನೇ ಅವಲಂಬಿಸಿದ್ದೇವೆ. ಮಳೆಯು ಸಾಕಷ್ಟು ಪ್ರಮಾಣದಲ್ಲಿ ಕಾಲ ಕಾಲಕ್ಕೆ ಸರಿಯಾಗಿ ಬಂದರೆ ವ್ಯವಸಾಯವು ಅಭಿವೃದ್ಧಿಯ ಪಥದಲ್ಲಿ ಸಾಗುತ್ತದೆ. ಆದರೆ ಇವತ್ತು ನಮ್ಮ ಅನುಭವ ಏನು ? ಮಳೆ ಬಂದರೆ ಬಂತು, ಇಲ್ಲದಿದ್ದರೆ ಇಲ್ಲ. ಬರುವ ಮಳೆ ಸಕಾಲದಲ್ಲಿ ಬಂದರೆ ಸರಿ, ಅಕಾಲದಲ್ಲಿ ಬಂದರೆ ನಷ್ಟ. ಮಳೆಯ ಪ್ರಮಾಣ ಅತಿವೃಷ್ಟಿ ಆದರೂ ಆಯಿತು, ಅನಾವೃಷ್ಟಿ ಆದರೂ ಆಯಿತು. ಇಂಥಾ ಮಳೆಯನ್ನು ನಂಬಿ ಕೊಂಡು ಶತಮಾನಗಳಿಂದ ನಮ್ಮ ದೇಶದ ವ್ಯವಸಾಯ ನಡೆದುಬಂದಿದೆ. ನಮ್ಮ ದೇಶದಲ್ಲಿ ಕೆಲವು ಪ್ರದೇಶ ಗಳು ನಿರಂತರವಾಗಿ ಅನಾವೃಷ್ಟಿಗೆ ಗುರಿಯಾದವಾಗಿವೆ. ನೀರಿಲ್ಲದ ಸ್ಥಳಗಳಿಗೆ ಹೊಳೆ ಬಾವಿಗಳಿಂದ ನೀರನ್ನು ಒದಗಿಸೋಣವೆಂದರೆ ಮಳೆಯಿಲ್ಲದಿದ್ದರೆ ಆ ಜಲಾಶಯಗಳಲ್ಲಿಯೂ ನೀರಿನ ಕೊರತೆಯಿರುತ್ತದೆ. ದೊಡ್ಡ ನಿರಂತರ ಪ್ರವಾಹವಿರುವ ನದಿಗಳಿಗೆ ಈಗ ಕಟ್ಟಿರುವ ಹಾಗೂ ಕಟ್ಟುತ್ತಿರುವ ಬೃಹತ್ ಅಣೆಕಟ್ಟುಗಳು ಹಿಂದಿನ ಕಾಲದ ಜನರ ತಿಳುವಳಿಕೆ, ಕಲ್ಪನೆಗಳಿಗೆ ಮೀರಿದವಾಗಿದ್ದವು. ಎರಡನೆಯದಾಗಿ, ನಮ್ಮ ದೇಶದ ಅನಿಶ್ಚಿತ ಮಳೆಯಿಂದಾಗಿ ಜಾನುವಾರುಗಳಿಗೂ ಸರಿಯಾಗಿ ಮೇವಿಲ್ಲದೆ ಅವೂ ಬಡಕಲಾಗಿರುತ್ತವೆ. ಇವು ಅನೇಕ ವೇಳೆ ಬೇಸಾಯ ಕಾಲದಲ್ಲಿ ಸಾಯುವುದರಿಂದಲೂ ರೈತನ ಬೆಳೆ ಬೆಳೆಸುವ ಶಕ್ತಿಯು ಕುಂದುತ್ತದೆ. ಇವುಗಳ ಜತೆಗೆ ರೈತನು ಬೆಳೆಸಿದ ಬೆಳೆಗಳಿಗೆ ಹುಳು ಹುಪ್ಪಟೆಗಳೂ ಕ ಾ ಣಗಳೂ, ಪಶುಪಕ್ಷಿಗಳೂ ಬಿದ್ದು ನಾಶ ಪಡಿಸುತ್ತವೆ. ಹಿಂದಿನ ಕಾಲದಲ್ಲಿ ರೈತನಿಗೆ ತನ್ನ ಬೆಳೆಗಳನ್ನು ಹುಳು ಹುಪ್ಪಟೆಗಳಿಂದ ರಕ್ಷಿಸಿಕೊಳ್ಳುವ ಸಾಧನಗಳು ತಿಳಿದಿರಲಿಲ್ಲ. ಇವೆಲ್ಲವೂ ರೈತನ ಹಿಡಿತದಲ್ಲಿಲ್ಲದ ಕಾರಣಗಳಾಗಿದ್ದು ರೈತನು ಬೆಳೆಯುವ ಬೆಳೆಯ ಪ್ರಮಾಣವನ್ನು ತಗ್ಗಿಸಿ ಅವನು ತನ್ನ ಜೀವನಾವಶ್ಯಕ ವಸ್ತುಗಳನ್ನು ಪಡೆಯಲು ಸಾಲ ಮಾಡ ಬೇಕಾದ ಸಂದರ್ಭಗಳು ಒದಗುತ್ತವೆ.

ರೈತನ ಹಿಡಿತದಲ್ಲಿದ್ದು ಅವನ ಸಂಪ್ರದಾಯಬದ್ಧತೆಯಿಂದಲೋ ಯಾ ದುಶ್ಚಟಗಳಿಗೆ ಬಲಿಯಾ ಗಿಯೋ ಯಾ ತಿಳುವಳಿಕೆಯ ಅಭಾವದಿಂದಲೋ ಆತನು ಸಾಲಗಾರನಾಗುವ ಪ್ರಸಂಗಗಳು ಬರುತ್ತವೆ. ಉದಾಹರಣೆಗೆ, ರೈತನು ತನ್ನ ಮನೆಗಳಲ್ಲಾಗುವ ವಿವಾಹ, ಹಬ್ಬ ಹರಿದಿನಗಳನ್ನೂ ಇನ್ನಿತರ ಸಮಾರಂಭ ಗಳನ್ನೂ ತನಗೆ ತನ್ನ ಭೂಮಿಯಿಂದ ಬರುವ ವಾರ್ಷಿಕ ವರಮಾನವನ್ನು ಮೀರಿ ಖರ್ಚು ಮಾಡಿ ಮಾಡು ತ್ತಾನೆ. ಆತನಿಗೆ ತನ್ನ ವಾರ್ಷಿಕ ಉತ್ಪತ್ತಿಯು ಎಷ್ಟೇ ಇರಲಿ, ಊರಿನಲ್ಲಿ ಯಾ ಗ್ರಾಮದಲ್ಲಿ ತಾನು ಒಬ್ಬ ಗಣ್ಯವ್ಯಕ್ತಿಯೆಂದೆನಿಸಿಕೊಳ್ಳಬೇಕೆಂದಿರುತ್ತದೆ. ಆದುದರಿಂದ ಸಾಲ ಮಾಡಿಯಾದರೂ ತನ್ನ ಮನೆಯಲ್ಲಾಗುವ ಸಮಾರಂಭಗಳನ್ನು ಜರುಗಿಸಬೇಕೆಂಬ ಮನೋವೃತ್ತಿಯು ಆತನಿಗಿದ್ದು ಇದರಿಂದ ಆತನು ಸಾಲ ಎತ್ತುವ ಸಂದರ್ಭಗಳು ಒದಗುತ್ತವೆ. ಎರಡನೆ, ರೈತನು ಒಂದುವೇಳೆ ಮದ್ಯಪಾನದ ಯಾ ಜುಗಾರಿ ಆಡುವುದರ ಯಾ ದುರಾಚಾರದ ದುಶ್ಚಟಗಳಿಗೆ ಬಿದ್ದರೆ ಅವನ ಸಂಪಾದನೆಯ ಹೆಚ್ಚಿನ ಪಾಲೆಲ್ಲಾ ಆ ಚಟಗಳಿಗೆ ವಿನಿಯೋಗವಾಗಿ ಅವನು ಸಾಲ ಮಾಡುವ ಅವಶ್ಯಕತೆಗೆ ಬೀಳುತ್ತಾನೆ. ಅಂತವನಿಗೆ ತಾನು ನ್ಯಾಯವಾಗಿ ಮಾಡಬೇಕಾದ ವ್ಯವಸಾಯ ಮತ್ತಿತರ ಕಸಬುಗಳಿಗೆ ಸಲ್ಲಬೇಕಾದ ಸಮಯ, ಕೆಲಸ, ಪ್ರಯತ್ನ, ವಸ್ತು ಗಳನ್ನು ಕೊಡಲು ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಆತನ ವರಮಾನವೂ ಕಡಿಮೆಯಾಗುತ್ತಾ ಬರುತ್ತದೆ. ಮೂರನೆ, ರೈತನು ತನಗೆ ತಿಳುವಳಿಕೆ ಇಲ್ಲದ್ದರಿಂದಲೋ, ಇನ್ನೊಬ್ಬರ ದಾಕ್ಷಿಣ್ಯಕ್ಕೆ ಕಟ್ಟು

ಬಿದ್ದೋ ತಾನು ಬೆಳೆದ ವಸ್ತುಗಳನ್ನು ಸಹಕಾರ ಸಂಘಗಳ ಮೂಲಕ ಅಥವಾ ಇತರ ಅಧಿಕೃತ ವ್ಯಾಪಾರಿಗಳ ಮೂಲಕ ಸರಿಯಾದ ಬೆಲೆಗೆ ಮಾರದೆ ಅದಕ್ಕಿಂತ ಕಡಿಮೆ ಬೆಲೆಗೆ ಮಾರುತ್ತಾನೆ. ಕೆಲವು ರೈತರು ಸಣ್ಣ ಪುಟ್ಟ ಕಾರಣಗಳಿಗಾಗಿ ತಮ್ಮ ಕುಟುಂಬದವರೊಡನೆ ಅಥವಾ ನೆರೆಯುವರೊಡನೆ ವ್ಯಾಜ್ಯ ಹೂಡಿ ಹಣ ಕಳೆಯುವ ಪ್ರಸಂಗಗಳು ಇಲ್ಲದಿಲ್ಲ.

ಹೀಗೆ ಭಾರತದ ರೈತರು ತಮ್ಮ ಹಿಡಿತದಲ್ಲಿರದ ಮತ್ತು ಹಿಡಿತದಲ್ಲಿದ್ದು ಅವುಗಳನ್ನು ಸರಿಯಾಗಿ ಉಪಯೋಗಿಸದ ಅನೇಕ ಕಾರಣಗಳಿಂದ ಸಾಲಗಾರರಾಗಿರುವರು. ಸಾಧಾರಣ ಪ್ರತಿಯೊಂದು ಗ್ರಾಮದಲ್ಲಿ ಶೇಕಡ 75ರಷ್ಟು ಚಿಕ್ಕ ದೊಡ್ಡ ಸಾಲಗಾರರಿರುವರು. ಶೇಕಡ ಹದಿನೈದು ಮಂದಿ ತಮ್ಮ ಭೂಮಿಯಲ್ಲಿ ಬೆಳೆದುದನ್ನು ತಾವು ಎಚ್ಚರದಿಂದ ಉಪಯೋಗಿಸಿಕೊಂಡು ಸಾಲವಿಲ್ಲದೆ ಇತರರ ಗೋಜಿಗೆ ಹೋಗದೆ ಜೀವಿಸುವರು. ಉಳಿದ ಶೇಕಡಾ ಹತ್ತು ಮಂದಿ ಗ್ರಾಮದ ಮೇಲೆ ಹೇಳಿದ ಶೇಕಡಾ ಎಪ್ಪತ್ತೈದು ಮಂದಿ ರೈತರಿಗೆ ದೊಡ್ಡ ಬಡ್ಡಿಯಲ್ಲಿ ಹಣವನ್ನು ಸಾಲಕೊಟ್ಟು ಅವರ ಶೋಷಣೆಯನ್ನು ಮಾಡುವರು. ಉದಾಹರಣೆಗೆ ಒಬ್ಬ ಬಡ ರೈತನಿಗೆ 1 ಸಾವಿರ ರೂಪಾಯಿಗಳನ್ನು ಒಬ್ಬ ಧನಿಕ ರೈತನು ಸಾಲವಾಗಿ ಕೊಟ್ಟರೆ ಆ ರೈತನು ಸಾಲ ತೆಗೆದುಕೊಂಡ ಹತ್ತು ತಿಂಗಳಲ್ಲಿ ಇಲ್ಲವೇ ಒಂದು ವರ್ಷದಲ್ಲಿ ಹತ್ತು ಭಟ್ಟಿ ಭತ್ತವನ್ನು ಬಡ್ಡಿ ರೂಪದಲ್ಲಿ ಕೊಡಬೇಕು. ಅಕ್ಟೋಬರ್ ತಿಂಗಳಲ್ಲಿ ಒಂದು ಭಟ್ಟಿ ಭತ್ತವನ್ನು ಸಾಲವಾಗಿ ತೆಗೆದು ಕೊಂಡರೆ ಫೆಬ್ರವರಿ ತಿಂಗಳಲ್ಲಿ ಅರ್ಧ ಭಟ್ಟಿ ಭತ್ತವನ್ನು ಮೂಲಕ್ಕೆ ಸೇರಿಸಿ ಒಂದೂವರೆ ಭಟ್ಟಿ ಭತ್ತವನ್ನು ಮರುಪಾವತಿಸಬೇಕು. ಈ ಭತ್ತದ ರೂಪದ ಬಡ್ಡಿಯು ಶೇಕಡ 40ರಿಂದ 70ರ ವರೆಗೆ ಆಗುತ್ತದೆಂದು ಸುಲಭವಾಗಿ ಹೇಳಬಹುದು. ಭಾರತದ ಹಾಗೂ ಕೊಡಗಿನ ರೈತರು ತಲೆತಲಾಂತರದಿಂದ ತಮ್ಮ ಗ್ರಾಮದಲ್ಲಿರುವ ಇಲ್ಲವೇ ತಮ್ಮ ನೆರೆ ಗ್ರಾಮ ಯಾ ಪಟ್ಟಣದಲ್ಲಿರುವ ಕೆಲವೇ ಕೆಲವು ಹಣಗಾರರಿಂದ ಅವರು ಹೇಳಿದ ಶರತ್ತುಗಳಿಗೆ ಒಪ್ಪಿ ಅವರಿಂದ ಹಣ ಸಾಲ ಪಡೆದು ಆ ಸಾಲವನ್ನು ತೀರಿಸಲಾರದೆ ಕಷ್ಟಪಡುತ್ತಿರುವರು. ಇದರ ಪರಿಣಾಮವಾಗಿ ಕೆಲವು ರೈತರು ತಮ್ಮ ಚಿಕ್ಕ ಭೂಸ್ವತ್ತುಗಳನ್ನು ಕಳೆದುಕೊಂಡು ಇನ್ನೊಬ್ಬರ ಭೂಮಿಗಳಲ್ಲಿ ಗೇಣಿದಾರರಾಗಿ ಅಥವಾ ದಿನಗೂಲಿ ಮಾಡುವವರಾಗಿ ತಮ್ಮ ಮತ್ತು ತಮ್ಮ ಕುಟುಂಬದ ಜೀವನವನ್ನು ಬಹಳ ಕಷ್ಟದಿಂದ ಸಾಗಿಸುವುದೂ ಸಾಮಾನ್ಯವಾಗಿದೆ.

ಹೀಗೆ ಸಾಹುಕಾರರ ಅಥವಾ ಊರ ಧನಿಕರ ಶೋಷಣೆಗೆ ಒಳಗಾದಂತ ರೈತರನ್ನು ಅವರ ಹಿಡಿತದಿಂದ ಬಿಡಿಸುವುದಕ್ಕೆ, ರೈತರಿಗೆ ಕಡಿಮೆ ದರದ ಬಡ್ಡಿಯಲ್ಲಿ ಸುಲಭ ಕಂತುಗಳಲ್ಲಿ ಹಣವನ್ನು ಒದಗಿಸುವುದಕ್ಕೆ, ಸಹಕಾರಿ ಸಂಘಗಳು ಹಿಂದುಸ್ಥಾನದಲ್ಲಿ 1904ರಲ್ಲಿ ಪ್ರಾರಂಭಿಸಲ್ಪಟ್ಟವು. ಯೂರೋಪ್ ಖಂಡದಲ್ಲಿ ಸಹಕಾರ ಸಂಘಗಳು ಹತ್ತೊಂಭತ್ತನೆಯ ಶತಮಾನದ ಪೂರ್ವಾರ್ಧದಲ್ಲೇ ಸ್ಥಾಪಿಸಲ್ಪಟ್ಟದ್ದವು. ಹಿಂದುಸ್ಥಾನದಲ್ಲಿ 1904ರಲ್ಲಿ ಪ್ರಾರಂಭವಾದ ಸಹಕಾರ ಸಂಘಗಳ ಸ್ಥಾಪನೆಯು ಅಲ್ಲಿಂದ ಇಲ್ಲಿವರೆಗೆ ಬಹಳ ಅಭಿವೃದ್ಧಿಯನ್ನು ಹೊಂದಿದೆ. ಬರೇ, ಹಣ ಸಾಲ ಕೊಡುವ ಸಂಘಗಳಲ್ಲದೆ, ನ್ಯಾಯ ಬೆಲೆಗೆ ಸಾಮಗ್ರಿಗಳನ್ನು ಮಾರುವ ಗ್ರಾಹಕರ ಸಹಕಾರಿ ಸಂಘಗಳೂ, ಕೃಷಿ ಉತ್ಪಾದಕರ ಬೆಳೆಗಳನ್ನು ಯೋಗ್ಯಬೆಲೆ ಸಿಗುವಂತೆ ಮಾರಿಸುವ ಉತ್ಪಾದಕರ ಸಂಘಗಳೂ, ಇತರ ಉದ್ಯಮಗಾರರ ಸಂಘಗಳೂ ಸ್ಥಾಪಿಸಲ್ಪಟ್ಟವೆ.

ಆದರೆ ಈ ಸಂಘಗಳು ಪೇಟೆ ಪಟ್ಟಣಗಳಲ್ಲೇ ಸ್ಥಾಪಿಸಲ್ಪಟ್ಟು ಗ್ರಾಮಗಳಲ್ಲಿರುವ ರೈತರಿಗೆ ಹೆಚ್ಚು ಪ್ರಯೋಜನಕಾರಿಯಾಗಿಲ್ಲ.

ಹಾಗಾದರೆ ಗ್ರಾಮದಲ್ಲಿರುವ ರೈತರ ಮತ್ತು ಇತರ ಕಸಬುಗಾರರ ಉದ್ಧಾರಕ್ಕೆ ಸಹಕಾರ ಸಂಘಗಳು ಹೇಗೆ ಶ್ರಮಿಸಬಹುದು ? ಮೊದಲಾಗಿ, ಪ್ರತಿ ಗ್ರಾಮಕ್ಕೊಂದರಂತೆ, ಗ್ರಾಮವು ಜನಸಂಖ್ಯೆಯಲ್ಲಿ ಮತ್ತು ವಿಸ್ತೀರ್ಣದಲ್ಲಿ ಚಿಕ್ಕದಾಗಿದ್ದರೆ ಅಂಥಾ 2 ಗ್ರಾಮಗಳಿಗೊಂದರಂತೆ, ವಿವಿಧೋದ್ದೇಶ ಸೇವಾ ಸಹಕಾರ ಸಂಘವಿರಬೇಕು. ಇಂಥಾ ಸಂಘದ ಭಂಡವಾಳವು ಗ್ರಾಮಸ್ಥರ ಎಲ್ಲಾ ವಿಧದ ಆವಶ್ಯಕತೆಗಳಿಗೆ ಸಾಲ ಕೊಡಲಾಗುವಷ್ಟು ಸಮೃದ್ಧವಾಗಿರಬೇಕು. ಇಂಥಾ ಗ್ರಾಮ ಸೇವಾ ಸಹಕಾರ ಸಂಘದ ಸದಸ್ಯರಾಗಿ ಗ್ರಾಮದ ಎಲ್ಲಾ ರೈತರು ಸೇರಬೇಕು. ಇಂಥಾ ಸಹಕಾರ ಸಂಘವು ಗ್ರಾಮವಾಸಿಗಳನ್ನು ಸಾಲದ ಬಾಧೆಯಿಂದ ಮುಕ್ತರನ್ನಾಗಿ ಮಾಡುವ ಮತ್ತು ಗ್ರಾಮವಾಸಿಗಳಿಗೆ ಬೇಕಾಗುವ ಎಲ್ಲಾ ರೀತಿಯ ಜೀವನಾವಶ್ಯಕ ಮತ್ತು ಕೃಷಿಗೆ ಬೇಕಾಗುವ ಸಾಮಗ್ರಿಗಳನ್ನು ಈ ಸಂಘದ ಮೂಲಕ ಒದಗಿಸುವ ಮತ್ತು ಅವರು ಉತ್ಪಾದಿಸುವ ಎಲ್ಲಾ ವಸ್ತುಗಳನ್ನು ಈ ಸಂಘದ ಮೂಲಕ ಕೊಂಡುಕೊಂಡು ಮಾರುವ ಕೆಲಸವನ್ನು ಮಾಡಬೇಕು.

ಇಂಥಾ ಸಂಘಗಳಿಂದ ಗ್ರಾಮದ ರೈತರಿಗೆ ಮತ್ತು ಇತರ ಕಸಬುದಾರರಿಗೆ ಸಾಲ ಪಾವತಿ ಮಾಡಬೇಕಾದರೆ ಮೊದಲು ಆ ಸಂಘಗಳ ಆಡಳಿತ ಮಂಡಳಿಯವರು ಪ್ರತಿಯೊಬ್ಬ ಗ್ರಾಮವಾಸಿಯ ಸಾಲ ಪಡಕೊಳ್ಳುವ ಅರ್ಹತೆ ಮತ್ತು ಮಿತಿಗಳನ್ನು (Loan-worthiness) ಒಳಗೊಂಡ ಒಂದು ತಖ್ತೆಯನ್ನು ತಮ್ಮ ಕಛೇರಿಯಲ್ಲಿಟ್ಟುಕೊಳ್ಳಬೇಕು. ಈ ತಖ್ತೆಯನ್ನು ತಯಾರಿಸುವುದಕ್ಕೆ ಒಂದು ಪ್ರಶ್ನಾವಳಿಯನ್ನು ಹೊರಡಿಸಿ ಅದಕ್ಕೆ ಉತ್ತರಗಳನ್ನು ಪ್ರತಿ ಗ್ರಾಮವಾಸಿಯಿಂದಲೂ ಪಡೆಯಬೇಕು. ವರ್ಷ ವರ್ಷ ಆತನ ವರಮಾನದ ಹೆಚ್ಚು ಕಡಿಮೆಯನ್ನೂ ಆತನಿಂದ ಪಡೆಯಬೇಕು. ಸಹಕಾರ ಸಂಘಗಳು ಇಂಥಾ ತಖ್ತೆಗಳನ್ನು ತಯಾರಿಸುವುದರಲ್ಲಿ ಗ್ರಾಮ ಪಂಚಾಯತಿ ಮಂಡಳಿಯವರು ಇವರಿಗೆ ಅವಶ್ಯವಿರುವ ನೆರವನ್ನು ಕೊಡಬೇಕು. ಗ್ರಾಮ ಪಂಚಾಯತಿ ಕಛೇರಿಯಲ್ಲಿ ಆ ಗ್ರಾಮ ಪಂಚಾಯತಿ ಕ್ಷೇತ್ರಕ್ಕೆ ಸೇರಿದ ಪ್ರತಿಯೊಬ್ಬ ರೈತನ ಅಥವಾ ಮನೆ ಮಾಡಿಕೊಂಡು ವಾಸವಿರುವ ಕೈಕಸಬುದಾರರ ಹೆಸರುಗಳು ಇರುತ್ತವೆ; ಯಾಕೆಂದರೆ ಗ್ರಾಮ ಪಂಚಾಯತಿ ಮಂಡಳಿಯವರು ತಮ್ಮ ಕ್ಷೇತ್ರಗಳಲ್ಲಿ ಮನೆಗಂದಾಯವನ್ನು ವಿಧಿಸಿ ವಸೂಲು ಮಾಡಬೇಕಾದರೆ ತಮ್ಮ ಕ್ಷೇತ್ರಗಳಲ್ಲಿ ಪ್ರತ್ಯೇಕ ಪ್ರತ್ಯೇಕ ಸಂಸಾರಗಳಿರುವ ಮನೆಗಳ ಲೆಕ್ಕವನ್ನಿಡಬೇಕು. ಹಾಗೆಯೇ ಅವರಲ್ಲಿ ಗ್ರಾಮ ಪಂಚಾಯತಿ ಕ್ಷೇತ್ರದ ಭೂ ಹಿಡುವಳಿದಾರರ ಭೂಮಿಯ ವಿಸ್ತೀರ್ಣ ಮೊದಲಾದ ವಿವರಗಳು ಬರೆದಿಡಲ್ಪಟ್ಟಿರುತ್ತವೆ. ಗ್ರಾಮ ಪಂಚಾಯತಿ ಮಂಡಳಿಗಳ ಸಹಕಾರದಿಂದ ಗ್ರಾಮದ ಸಹಕಾರ ಸಂಘವು ಪ್ರತಿಯೊಬ್ಬ ಖಾಯಂ ಗ್ರಾಮವಾಸಿಯ ಅವರಲ್ಲೂ ಸಂಘದ ಸದಸ್ಯನಾಗಿರುವ ಗ್ರಾಮವಾಸಿಯ ಭೂಸ್ವತ್ತಿನ ತಪಶೀಲು, ಆತನಿಗೆ ವಿವಿಧ ಬೆಳೆಗಳಿಂದ ಬರಬಹುದಾದ ವಾರ್ಷಿಕ ವರಮಾನ ಮೊದಲಾದವುಗಳ ವಿವರಗಳನ್ನು ಪಡೆದು ತಮ್ಮ ರಿಜಿಸ್ಟರಿನಲ್ಲಿ ಬರಾಯಿಸಿಡಬೇಕು. ಇಂಥಾ ತಖ್ತೆಗಳಿಂದ ಪ್ರತಿಯೊಬ್ಬ ರೈತನ ಅಥವಾ ಇನ್ನಿತರ ಕಸಬುದಾರರ ಭೂಸ್ವತ್ತಿನ ಬೆಲೆ ಮತ್ತು ವಾರ್ಷಿಕ ಉತ್ಪತ್ತಿ ಯಾ ಇತರ ಉತ್ಪತ್ತಿಗಳ ಬೆಲೆಯು ಸಾಧಾರಣವಾಗಿ ದೊರೆತು ಆ ರೈತನು ಯಾ ಕಸಬುದಾರನು ತನ್ನ ಭೂಸ್ವತ್ತು ಮತ್ತು ಉತ್ಪತ್ತಿಗಳ ಮೇಲೆ ಎಷ್ಟು ಸಾಲ ಪಡೆಯಲು ಅರ್ಹನೆಂದು ತಿಳಿಯುತ್ತದೆ. ಈ ಹಣ ಸಾಲ ಕೊಡುವ

ಪ್ರತಿಯೊಂದು ಸಹಕಾರ ಸಂಘವೂ ಅದರ ಸದಸ್ಯನು ಸಾಲ ಪಡೆಯುವ ಅರ್ಹತೆಯಿರುವ ಮೊತ್ತದ ಶೇಕಡಾ 60ರಿಂದ 75ರಷ್ಟರ ವರೆಗೆ ಮಾತ್ರ ಸದಸ್ಯನಿಗೆ ಹಣ ಸಾಲ ಕೊಡಬೇಕು. ರೈತನ ಸಾಲ ಪಡೆಯುವ ಅರ್ಹತೆಯ ಮೇಲೆ ಆತನಿಗೆ ಸಂಘದಿಂದ ಸಾಲ ದೊರೆಯುವುದೆಂದಾದರೆ ಆತನು ತನ್ನ ಭೂಸ್ವತ್ತನ್ನು ಚೆನ್ನಾಗಿ ರೂಪಿಸಿ ಅದರಲ್ಲಿ ಬೆಳೆಯುವ ಎಲ್ಲಾ ಬೆಳೆಗಳನ್ನೂ ಹೆಚ್ಚು ಹೆಚ್ಚಾಗಿ ಬೆಳೆಯಲು ಪ್ರಯತ್ನಿಸುತ್ತಾನೆ; ಯಾಕೆಂದರೆ ಆತನು ತನ್ನ ಸ್ವತ್ತಿನ ಮತ್ತು ಅದರಿಂದ ಬರುವ ಬೆಳೆಗಳ ಬೆಲೆಯನ್ನು ಹೆಚ್ಚಿಸಿದಷ್ಟೂ ಅವನ ಸಾಲ ಪಡೆಯುವ ಹಣದ ಮೊತ್ತದ ಅರ್ಹತೆಯು ಹೆಚ್ಚಾಗುತ್ತದೆ. ಎರಡನೆಯದಾಗಿ, ರೈತನು ಯಾರಾದರೊಬ್ಬ ಖಾಸಗಿ ಮನುಷ್ಯನಿಂದ ಸಾಲ ಪಡೆದಿದ್ದರೆ ಸಹಕಾರ ಸಂಘವು ಆ ಮಾಹಿತಿಯನ್ನು ಪಡೆಯಬೇಕು. ಸಾಧಾರಣವಾಗಿ, ಯಾವ ಖಾಸಗಿ ಮನುಷ್ಯನೂ ಗ್ರಾಮಗಳಲ್ಲಿ ಒಬ್ಬ ಭೂ ಹಿಡುವಳಿದಾರನಿಗೆ ಅವನ ಆಸ್ತಿಯ ಬೆಲೆಯ ಅರ್ಧಕ್ಕಿಂತ ಹೆಚ್ಚು ಹಣವನ್ನು ಸಾಲವಾಗಿ ಕೊಡುವುದಿಲ್ಲ. ಹೀಗೆ ಖಾಸಗಿ ಜನರಿಂದ ಸಾಲಗಳನ್ನು ಪಡೆದ ಗ್ರಾಮವಾಸಿಗಳ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಬೇಕಾದರೆ ಸಹಕಾರ ಸಂಘಗಳು ಆ ಸಾಲಗಳನ್ನು ತಾವೇ ವಹಿಸಿಕೊಳ್ಳಬೇಕು. ಈ ಬಗ್ಗೆ ಸರಕಾರವು ಒಂದು ಕಾಯಿದೆಯನ್ನು ತಂದು ಭೂಸ್ವತ್ತಿನ ಆಧಾರದ ಮೇಲೆ ಯಾವ ಸಹಕಾರ ಸಂಘದ ಸದಸ್ಯನೂ ಸಹಕಾರ ಸಂಘದಿಂದಲ್ಲದೆ ಇತರ ಖಾಸಗಿ ಮನುಷ್ಯರಿಂದ ಇಲ್ಲವೇ ಸಂಸ್ಥೆಗಳಿಂದ ಸಾಲವನ್ನು ಪಡಕೊಳ್ಳಲು ಪ್ರತಿಬಂಧಿಸಬೇಕು. ಸಹಕಾರ ಸಂಘವು, ರೈತನು ಖಾಸಗಿ ಮನುಷ್ಯನಿಗೆ ಕೊಡುವುದಕ್ಕಿರುವ ಸಾಲದ ಬಡ್ಡಿಯನ್ನು ಸಂಘವು ಅಂಥಾ ಸಾಲಗಳ ಮೇಲೆ ವಿಧಿಸುವ ಬಡ್ಡಿ ದರಕ್ಕೇ ಇಳಿಸಬೇಕು. ಮೂರನೆ, ಗ್ರಾಮದಲ್ಲಿರುವ ಸಹಕಾರ ಸಂಘವು ಅಲ್ಲಿನ ರೈತನಿಗೆ ಎಲ್ಲಾ ವಿಧದ ಸಾಲಗಳನ್ನೂ ಕೊಡಬೇಕೆಂದು ನಾನು ಹಿಂದೆ ಹೇಳಿರುವೆನು. ಹೀಗೆ ಸಾಲ ಕೊಡುವಾಗ ಭತ್ತದ ವ್ಯವಸಾಯಕ್ಕೆ ಭತ್ತ ಬೆಳೆಯುವ ಭೂಮಿ, ಕಾಫಿ ವ್ಯವಸಾಯಕ್ಕೆ ಕಾಫಿ ತೋಟದ ಭಾಗ, ಏಲಕ್ಕಿ, ಕಿತ್ತಳೆ, ಅನಾನಸು ಮೊದಲಾದುವುಗಳನ್ನು ಬೆಳೆಸುವುದಕ್ಕೆ ಆಯಾಯ ಫಸಲಿರುವ ಸ್ಥಳಗಳನ್ನೂ ಸಂಘಕ್ಕೆ ಗಿರ್ವಿ ತೆಗೆದುಕೊಳ್ಳಬೇಕು. ಸಂಘದವರು ಬೇರೆ ಬೇರೆ ವಿಧದ ಉದ್ದೇಶಗಳಿಗೆ ಸಾಲ ಕೊಟ್ಟಮೇಲೆ ಆ ಉದ್ದೇಶಗಳಿಗೇನೆ ಸಾಲ ಕೊಟ್ಟ ಹಣವು ವಿನಿಯೋಗವಾಗಿದೆಯೇ ಎಂದು ಸಂಘದ ಆಡಳಿತ ಮಂಡಳಿಯವರು ಸ್ವತಃ ಹೋಗಿ ನೋಡಬೇಕು. ಆಡಳಿತ ಮಂಡಳಿಯವರು ಸ್ವತಃ ಬಂದು ಸಾಲ ಕೊಟ್ಟ ಹಣವು ಹೇಗೆ ವಿನಿಯೋಗವಾಯಿತೆಂದು ನೋಡುತ್ತಾರೆಂದರೆ ಸಾಲ ಪಡೆದುಕೊಂಡವನು ಆ ಹಣವನ್ನು ಮೊದಲೇ ಗೊತ್ತುಪಡಿಸಿದ ಉದ್ದೇಶಕ್ಕೇನೇ ಖರ್ಚು ಮಾಡುತ್ತಾನೆ. ಹಾಗಿಲ್ಲವಿದ್ದರೆ ಈಗಾಗುವಂತೆ ಬಾವಿ ತೋಡುವುದಕ್ಕೆ ತೆಗೆದುಕೊಂಡ ಸಾಲ ಹಬ್ಬದ ಖರ್ಚಿಗಾಯಿತು; ಭೂಮಿ ರೂಪಿತಕ್ಕೆ ತೆಗೆದುಕೊಂಡ ಸಾಲ ಮದುವೆ ಖರ್ಚಿಗಾಯಿತು ಎಂಬಂತಾಗುತ್ತದೆ. ನಾಲ್ಕನೆಯದಾಗಿ, ರೈತನು ತನ್ನ ಕರೆ ಫಸಲಾಗಿ ಬೆಳೆಸುವ ಬಾಳೆಹಣ್ಣು, ಅಡಿಕೆ, ಒಳ್ಳೆಮೆಣಸು, ನಿಂಬೆಹಣ್ಣು ಮೊದಲಾದ ವಸ್ತುಗಳನ್ನು ಗ್ರಾಮ ಸಹಕಾರ ಸಂಘವೇ ನ್ಯಾಯ ಬೆಲೆಗೆ ಕೊಂಡುಕೊಂಡು ಪಟ್ಟಣದ ಗ್ರಾಹಕರ ಸಹಕಾರ ಸಂಘಗಳೊಡನೆ ಸಂಪರ್ಕವಿಟ್ಟು ಅವುಗಳನ್ನು ಮಾರುವ ಏರ್ಪಾಡನ್ನು ಮಾಡಿಕೊಳ್ಳಬೇಕು. ಹಾಗೆಯೇ ಗ್ರಾಮವಾಸಿಗಳಿಗೆ ಬೇಕಾಗುವ ಜಿನಸು ಸಾಮಾನುಗಳ ಮತ್ತು ವ್ಯವಸಾಯದ ಉಪಕರಣಗಳ ಪಟ್ಟಿಯನ್ನು ಅವರಿಂದ ತಿಂಗಳಿಗೆ ಒಮ್ಮೆಯೋ ಹದಿನೈದು ದಿವಸಗಳಿಗೊಮ್ಮೆಯೋ ತರಿಸಿಕೊಂಡು ಅವರಿಂದ ಮುಂಗಡ ಹಣವನ್ನೂ ಪಡೆದು ಪಟ್ಟಣದ ಗ್ರಾಹಕರ ಸಂಘಗಳಿಂದ ಅವನ್ನು ತರಿಸಿಕೊಡುವ ವ್ಯವಸ್ಥೆ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಯ

ಅಡಿಕೆ ಮಾರಾಟಗಾರರ ಸಂಘವು ಗ್ರಾಮದ ರೈತರಿಗೆ ಮೇಲಿನ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಕೊಡುತ್ತದೆ. ಹೀಗೆ ರೈತನಿಗೆ ಬೇಕಾಗುವ ಬಟ್ಟೆ, ಔಷಧಿ ಸಾಮಾನುಗಳು ಮೊದಲಾದ ವಸ್ತುಗಳನ್ನು ಬಿಟ್ಟು ನಿತ್ಯ ಜೀವನದಲ್ಲಿ ರೈತನು ಕೊಂಡುಕೊಳ್ಳಬೇಕಾದ, ತಾನು ಮಾರುವುದಕ್ಕಿರುವ ಸಾಮಗ್ರಿಗಳ ಮತ್ತು ತನಗೆ ಬೇಕಾಗುವ ವಿವಿಧ ಸಾಲಗಳ ವಿತರಣೆಯನ್ನು ಗ್ರಾಮ ಸಹಕಾರ ಸಂಘಗಳೇ ವಹಿಸಿಕೊಂಡರೆ ಇನ್ನು ಕೆಲವೇ ವರ್ಷಗಳಲ್ಲಿ ಭಾರತದ ಹಾಗೂ ಕೊಡಗಿನ ರೈತರ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವುದರಲ್ಲಿ ಸಂಶಯವಿಲ್ಲ. ಹೀಗಾಗಬೇಕಾದರೆ ಸಹಕಾರ ಸಂಘಗಳ ಆಡಳಿತ ಮಂಡಳಿಯವರು ಸ್ವಾರ್ಥೋದ್ದೇಶಗಳಿಲ್ಲದೆ, ನ್ಯಾಯಪರರಾಗಿ, ಸದಸ್ಯರ ಹಿತವನ್ನೇ ಹೆಗ್ಗುರಿಯಾಗಿಟ್ಟು ಕೆಲಸ ಮಾಡಬೇಕು. ಅಂಥಾ ಉತ್ತಮ ಪಂಸ್ಥಿತಿಯು ಗ್ರಾಮಗಳಿಗೆ ಬರಲೆಂದು ಹಾರೈಸುವೆನು.

166

For Latest Designs
&
Fashionable Textile
VISIT

DRESS LAND

FANCY CLOTH MERCHANTS
Opp: POST OFFICE
Main Road :: VIRAJPET

Specialists in:—

Latest Wedding Sarees
and
Ready made Dresses

